# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು 560 003.**

## ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳು

**ಪ್ರಾಸ್ತಾವಿಕ ಪರಿಚಯ:**

ಸಂಗೀತ, ನೃತ್ಯ ಹಾಗೂ ತಾಳವಾದ್ಯ ಕಲೆಯ ಅಭಿವೃದ್ಧಿಯ ಜೊತೆಗೆ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಶಿಕ್ಷಕರಾಗಿ ಸರ್ಕಾರಿ/ಖಾಸಗಿ ವಲಯದಲ್ಲಿ ನೇಮಕಾತಿ ಹೊಂದಲು ಅವಕಾಶವಿದ್ದು ಸದುದ್ದೇಶದೊಂದಿಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು 1929 ನೇ ಸಾಲಿನಿಂದಲೂ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳನ್ನು ನಡೆಸುತ್ತಾ ಬಂದಿದೆ.ಅದರಂತೆ ಪ್ರತಿ ವರ್ಷವೂ ಅಕ್ಟೋಬರ್ ಮಾಹೆಯಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳನ್ನು ಕರ್ನಾಟಕ ಶಾಸ್ತ್ರೀಯ ಸಂಗೀತ, ಕರ್ನಾಟಕ ಶಾಸ್ತ್ರೀಯ ತಾಳವಾದ್ಯ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಹಿಂದೂಸ್ತಾನಿ ಶಾಸ್ತ್ರೀಯ ತಾಳವಾದ್ಯ, ಭರತನಾಟ್ಯ, ಕೂಚಿಪುಡಿ ನೃತ್ಯ, ಕಥಕ್ ನೃತ್ಯ ಈ ಪರೀಕ್ಷೆಗಳನ್ನು ನಾಲ್ಕು ವಿಭಾಗಗಳಲ್ಲಿ ಜೂನಿಯರ್ ವಿಭಾಗ, ಸೀನಿಯರ್ ವಿಭಾಗ, ವಿದ್ವತ್ ಪೂರ್ವ ವಿಭಾಗ ಹಾಗೂ ವಿದ್ವತ್ ಅಂತಿಮ ವಿಭಾಗಗಳೆಂದು ನಡೆಸಲಾಗುತ್ತಿದೆ. ಜೂನಿಯರ್ ವಿಭಾಗದಲ್ಲಿ ಒಂದು ಥಿಯರಿ ಪತ್ರಿಕೆ ಒಂದು ಶ್ರವಣ ದರ್ಶನ ಪತ್ರಿಕೆ ಹಾಗೂ ಎರಡು ಪ್ರಾಯೋಗಿಕ ಪತ್ರಿಕೆ ಪರೀಕ್ಷೆಗಳಿರುತ್ತವೆ ಸೀನಿಯರ್ ವಿಭಾಗದಲ್ಲಿ ಎರಡು ಥಿಯರಿ ಪತ್ರಿಕೆ, ಮೂರು ಪ್ರಾಯೋಗಿಕ ಪರೀಕ್ಷೆ ಪತ್ರಿಕೆಗಳಿರುತ್ತವೆ. ವಿದ್ವತ್ ಪೂರ್ವ ವಿಭಾಗದಲ್ಲಿ ಎರಡು ಥಿಯರಿ ಪತ್ರಿಕೆ, ಎರಡು ಪ್ರಾಯೋಗಿಕ ಪರೀಕ್ಷೆ ಪತ್ರಿಕೆಗಳಿರುತ್ತವೆ. ವಿದ್ವತ್ ಅಂತಿಮ ವಿಭಾಗದಲ್ಲಿ ಎರಡು ಥಿಯರಿ ಪತ್ರಿಕೆ, ಎರಡು ಪ್ರಾಯೋಗಿಕ ಪರೀಕ್ಷೆ ಪತ್ರಿಕೆಗಳಿರುತ್ತವೆ. ವಿದ್ವತ್ ಅಂತಿಮ ಪರೀಕ್ಷೆಯಲ್ಲಿ ಪ್ರಾಯೋಗಿಕ ಪರೀಕ್ಷೆಯ ಎರಡನೇ ಪತ್ರಿಕೆಯಲ್ಲಿ ಭಾಗ–1 ರಲ್ಲಿ ಅಭ್ಯರ್ಥಿಯು ಸಭಿಕರ ಮುಂದೆ ಹಾಡುವುದು ಹಾಗೂ ಭರತನಾಟ್ಯ ಮಾಡುವುದು ಇದಕ್ಕೆ ಮಂಚ ಪ್ರದರ್ಶನ ಎಂದು ಕರೆಯಲಾಗುತ್ತದೆ. ಈ ನಾಟ್ಯ/ಹಾಡುವಿಕೆಯನ್ನು ಆಧರಿಸಿ ಅಭ್ಯರ್ಥಿಗಳಿಗೆ ಪರೀಕ್ಷಕರು ಅಂಕಗಳನ್ನು ನೀಡುವರು.

**ಪರೀಕ್ಷೆಗೆ ಹಾಜರಾಗಲು ಅರ್ಹತೆ:**

ಪಠ್ಯಕ್ರಮದಂತೆ ಕಿರಿಯ ದರ್ಜೆ ಪರಿಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ದಿನಾಂಕ: 01–03–2015ಕ್ಕೆ 10 ವರ್ಷ ತುಂಬಿರಬೇಕು. ಶಾಲಾ ಮುಖ್ಯಸ್ಥರಿಂದ ಪಡೆದ ಮೂಲ ದಾಖಲೆ ಪತ್ರ/ ವರ್ಗಾವಣೆ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿ/ಎಸ್.ಎಸ್.ಎಲ್.ಸಿ.ಪರೀಕ್ಷೆಯ ಪ್ರಮಾಣ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿಯನ್ನು ಅರ್ಜಿಯ ಜೊತೆ ಕಡ್ಡಾಯವಾಗಿ ಲಗತ್ತಿಸುವುದು.ಕನಿಷ್ಠ ಕನ್ನಡ ನಾಲ್ಕನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು. ಹಾಗೂ ಕಡ್ಡಾಯವಾಗಿ 10 ವರ್ಷ ತುಂಬಿರಲೇಬೇಕು. ಅಭ್ಯರ್ಥಿಯು ಕನ್ನಡದಲ್ಲಿ ವ್ಯವಹರಿಸಲು ನೈಪುಣ್ಯತೆ ಪಡೆದಿರುವ ಬಗ್ಗೆ ಸಕ್ಷಮ ಅಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದು ಅರ್ಜಿಯ ಜೊತೆಗೆ ಲಗತ್ತಿಸುವುದು.

ಪಠ್ಯಕ್ರಮದಂತೆ ಹಿರಿಯ ದರ್ಜೆಗೆ ಅರ್ಜಿ ಸಲ್ಲಿಸಲು, ಕಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 3 ವರ್ಷ ಆಗಿರಬೇಕು.ಅಥವಾ 01.03.2015ಕ್ಕೆ ಸರಿಯಾಗಿ 17ವರ್ಷ ತುಂಬಿದ್ದು, ಅಭ್ಯರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ವ್ಯಾಸಂಗ ಮಾಡಿ (ಪಿ.ಯು.ಸಿ) ಪದವಿ ಪೂರ್ವ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ ನೇರವಾಗಿ ಹಿರಿಯ ದರ್ಜೆಗೆ ಕೂಡಲು ಅವಕಾಶವಿದೆ. ಸರ್ಕಾರದ ಆದೇಶ ಸಂಖ್ಯೆ ಇಡಿ–195–ಡಿಜಿಒ–2004 ಬೆಂಗಳೂರು, ದಿನಾಂಕ: 15.01.2005ರಂತೆ 01.03.2015 ಕ್ಕೆ 18 ವರ್ಷ ಪೂರ್ಣಗೊಂಡ ಅಭ್ಯರ್ಥಿಗಳು ನೇರವಾಗಿ ಹಿರಿಯ ದರ್ಜೆ ಸಂಗೀತ/ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆ ತೆಗೆದುಕೊಳ್ಳಬಹುದು. ಸದರಿ ಅಭ್ಯರ್ಥಿಗಳು ಪಾಠ ಮಾಡಿರುವ ಗುರುಗಳಿಂದ ಪರೀಕ್ಷೆಗೆ ನಿಗದಿಪಡಿಸಿದ ಪಠ್ಯ ವಸ್ತುವಿನ ಪಾಠ ಆಗಿರುವ ಬಗ್ಗೆ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಅರ್ಜಿ ಜೊತೆಗೆ ಲಗತ್ತಿಸುವುದು.

ವಿದ್ವತ್ ಪೂರ್ವ ದರ್ಜೆಗೆ ಅರ್ಜಿ ಸಲ್ಲಿಸಲು ಹಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 3 ವರ್ಷಗಳಾಗಿರಬೇಕು ಮತ್ತು ದಿನಾಂಕ: 01.03.2015 ಕ್ಕೆ ಸರಿಯಾಗಿ 19 ವರ್ಷ ತುಂಬಿರಬೇಕು. ದಿನಾಂಕ: 01.03.2015ಕ್ಕೆ 19ವರ್ಷ ಪೂರ್ಣಗೊಂಡಿರುವ ಅಭ್ಯರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ತೆಗೆದುಕೊಂಡು ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆ ವಿದ್ವತ್ ಪರೀಕ್ಷೆ ತೆಗೆದುಕೊಳ್ಳಬಹುದು. ವಿದ್ವತ್ ಪೂರ್ವ ಪರೀಕ್ಷೆ ಉತ್ತೀರ್ಣರಾದ ಒಂದು ವರ್ಷದ ನಂತರ ವಿದ್ವತ್ ಅಂತಿಮ

ಪರೀಕ್ಷೆ ತೆಗೆದುಕೊಳ್ಳಬಹುದು. ಅಭ್ಯರ್ಥಿಗಳು ಹಿರಿಯ ಮತ್ತು ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ದರ್ಜೆ ಪರೀಕ್ಷೆಗಳಿಗೆ ಕಳುಹಿಸುವ ಅರ್ಜಿಗಳ ಜೊತೆಯಲ್ಲಿ ಹಿಂದಿನ ಪರೀಕ್ಷೆಯ ಅಂದರೆ ಕಿರಿಯ ಮತ್ತು ಹಿರಿಯ ದರ್ಜೆಯ ಹಾಗೂ ವಿದ್ವತ್ ಪೂರ್ವ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿಯ ದೃಢೀಕೃತ ಛಾಯಾ ಪ್ರತಿಗಳನ್ನು ಲಗತ್ತಿಸುವುದು.

ಅಭ್ಯರ್ಥಿಯು ಥಿಯರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಪ್ರಾಯೋಗಿಕ ಪರೀಕ್ಷೆಗೆ ಮಾತ್ರ ಹಾಜರಾಗಬೇಕಾಗುತ್ತದೆ.ಅದೇ ರೀತಿ ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಥಿಯರಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಥಿಯರಿ ಪರೀಕ್ಷೆಗೆ ಮಾತ್ರ ಹಾಜರಾಗಲು ಅವಕಾಶವಿದೆ.

**ಶಾಸ್ತ್ರ–1 ಮತ್ತು ಶಾಸ್ತ್ರ 2:**ಪತ್ರಿಕೆಗಳಲ್ಲಿ ಅಭ್ಯರ್ಥಿಗಳು ಅನುತ್ತೀರ್ಣರಾಗಿರುವ ಪತ್ರಿಕೆಗೆ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ.

**ಪ್ರಾಯೋಗಿಕ ಪರೀಕ್ಷೆ:** ಪರೀಕ್ಷೆಗೆ ಸಂಬಂಧಿಸಿದಂತೆ ಎರಡು ಅಥವಾ ಮೂರು ಪ್ರಾಯೋಗಿಕ ಪತ್ರಿಕೆಗಳಿದ್ದಲ್ಲಿ ಯಾವುದಾದರು ಒಂದು ಪತ್ರಿಕೆಯಲ್ಲಿ ಅನುತ್ತೀರ್ಣರಾಗಿದ್ದರೂ ಎಲ್ಲಾ ಪತ್ರಿಕೆಗಳಿಗೂ ಪರೀಕ್ಷೆ ತೆಗೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಪ್ರತಿ ವರ್ಷವೂ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಜುಲೈ ತಿಂಗಳಲ್ಲಿ ಆಹ್ವಾನಿಸಲಾಗುತ್ತದೆ.

## “Details”

Holding of Examination the Karnataka Secondary Education Examination Board shall hold the following examinations in Music, Dance and Talavadya every year.

| Sl. No | Subject Name | Subject Code |
|---|---|---|
| 1 | Karnataka Music Junior Grade Vocal | MU01-<br>Theory, Aural, Prarctical 1 & Practical 2 |
| 2 | Karnataka Music Junior Grade Instrumental | MU02<br>Theory, Aural, Prarctical 1 & Practical 2 |
| 3 | Karnataka Music Senior Grade Vocal | MU03<br>Theory 1&2, Prarctical 1 ,2 & Practical 3 |

| | | |
|---|---|---|
| 4 | Karnataka Music Senior Grade Instrumental | MU04<br>Theory 1&2, Prarctical 1 ,2 & Practical 3 |
| 5 | Karnataka Music Vidwat Poorva Vocal | MU05<br>Theory 1&2, Prarctical 1 &2 |
| 6 | Karnataka Music Vidwat Poorva Instrumental | MU06<br>Theory 1&2, Prarctical 1 &2 |
| 7 | Karnataka Music Vidwat Final Vocal | MF07<br>Theory 1&2, Prarctical 1 ,2.1 & 2.2 |
| 8 | Karnataka Music Vidwat Final Instrumental | MF08<br>Theory 1&2, Prarctical 1 ,2.1 & 2.2 |
| 9 | Karnataka Talavadya Junior Grade Instrumental | MU12<br>Theory, Aural, Prarctical 1 & Practical 2 |
| 10 | Karnataka Talavadya Senior Grade Instrumental | MU14<br>Theory 1&2, Prarctical 1 ,2 & Practical 3 |
| 11 | Karnataka Talavadya Vidwat Poorva Instrumental | MU16<br>Theory 1&2, Prarctical 1 &2 |
| 12 | Karnataka Talavadya Vidwat Final Instrumental | MF16<br>Theory 1&2, Prarctical 1 ,2.1 & 2.2 |
| 13 | Hindustani Music Junior Grade Vocal | MU21<br>Theory, Aural, Prarctical 1 & Practical 2 |
| 14 | Hindustani Music Junior Grade Instrumental | MU22<br>Theory, Aural, Prarctical 1 & Practical 2 |
| 15 | Hindustani Music Senior Grade Vocal | MU23<br>Theory 1&2, Prarctical 1 ,2 & Practical 3 |
| 16 | Hindustani Music Senior Grade Instrumental | MU24<br>Theory 1&2, Prarctical 1 ,2 & Practical 3 |

| | | |
|---|---|---|
| 17 | Hindustani Music Vidwat Poorva Vocal | MU25<br>Theory 1&2, Prarctical 1 &2 |
| 18 | Hindustani Music Vidwat Poorva Instrumental | MU26<br>Theory 1&2, Prarctical 1 &2 |
| 19 | Hindustani Music Vidwat Final Vocal | MF27<br>Theory 1&2, Prarctical 1 ,2.1 & 2.2 |
| 20 | Hindustani Music Vidwat Final Instrumental | MF28<br>Theory 1&2, Prarctical 1 ,2.1 & 2.2 |
| 21 | Hindustani Talavadya Junior Grade Instrumental | MU32<br>Theory, Aural, Prarctical 1 & Practical 2 |
| 22 | Hindustani Talavadya Senior Grade Instrumental | MU34<br>Theory 1&2, Prarctical 1 ,2 & Practical 3 |
| 23 | Hindustani Talavadya Vidwat Poorva Instrumental | MU36<br>Theory 1&2, Prarctical 1 &2 |
| 24 | Hindustani Talavadya Vidwat Final Instrumental | MF37<br>Theory 1&2, Prarctical 1 ,2.1 & 2.2 |
| 25 | Bharatanatyam Junior Grade | MU41<br>Theory, Visual, Prarctical 1 & Practical 2 |
| 26 | Bharatanatyam Senior Grade | MU43<br>Theory 1&2, Prarctical 1 ,2 & Practical 3 |
| 27 | Bharatanatyam Vidwat Poorva | MU45<br>Theory 1&2, Prarctical 1 &2 |
| 28 | Bharatanatyam Vidwat Final | MU46<br>Theory 1&2, Prarctical 1 ,2.1 & 2.2 |

| | | |
|---|---|---|
| 29 | Kathakali Dance Junior Grade | MK51<br>Theory, Visual, Prarctical 1 & Practical 2 |
| 30 | Kathakali Dance Senior Grade | MK53<br>Theory 1&2, Prarctical 1 ,2 & Practical 3 |
| 31 | Kathakali Dance Vidwat Poorva Grade | MK55<br>Theory 1&2, Prarctical 1 &2 |
| 32 | Kathakali Dance Vidwat Final Grade | MK56<br>Theory 1&2, Prarctical 1 ,2.1 & 2.2 |
| 33 | Kuchupudi Dance Junior Grade | KU61<br>Theory, Visual, Prarctical 1 & Practical 2 |
| 34 | Kuchupudi Dance Senior Grade | KU63<br>Theory 1&2, Prarctical 1 ,2 & Practical 3 |
| 35 | Kuchupudi Dance Vidwat Poorva | KU65<br>Theory 1&2, Prarctical 1 &2 |
| 36 | Kuchupudi Dance Vidwat Final | KU66<br>Theory 1&2, Prarctical 1 ,2.1 & 2.2 |
| 37 | Kathak Dance Junior Grade | KA71<br>Theory, Visual, Prarctical 1 & Practical 2 |
| 38 | Kuchupudi Dance Senior Grade | KA73<br>Theory 1&2, Prarctical 1 ,2 & Practical 3 |
| 39 | Kathak Dance Vidwat Poorva | KA75<br>Theory 1&2, Prarctical 1 &2 |
| 40 | Kathak Dance Vidwat Final | KA76<br>Theory 1&2, Prarctical 1 ,2.1 & 2.2 |

**ಪರೀಕ್ಷಾ ಶುಲ್ಕಗಳ ವಿವರ:**

ಪರೀಕ್ಷೆ ತೆಗೆದುಕೊಳ್ಳಲಿಚ್ಛಿಸುವ ಅಭ್ಯರ್ಥಿಗಳು ನಿಗಧಿತ ಪರೀಕ್ಷಾ ಶುಲ್ಕದ ಮೊತ್ತವನ್ನು**ಮಂಡಳಿಯ ಚಲನ್ ಮೂಲಕ ಪಾವತಿಸಿ ಮೂಲ ಪ್ರತಿಯನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸಲ್ಲಿಸುವುದು.**ಪರೀಕ್ಷಾ ಶುಲ್ಕ ಈ ಕೆಳಕಂಡಂತಿದೆ. (ಚಲನ್ ಪ್ರತಿಯನ್ನು ಲಗತ್ತಿಸಿದೆ)

**2015ರಲ್ಲಿ ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳ ಶುಲ್ಕದ ವಿವರ**

| ಕ್ರಮ ಸಂಖ್ಯೆ | ಪರೀಕ್ಷೆಯ ಹೆಸರು | ಪರೀಕ್ಷಾ ಶುಲ್ಕರೂ. | ಫಲಿತಾಂಶತಿಳಿಸುವ/ ಲ್ಯಾಮಿನೇಷನ್ಶುಲ್ಕ ರೂ. | ಒಟ್ಟು ಶುಲ್ಕ ರೂ. |
|---|---|---|---|---|
| 1 | ಕಿರಿಯ ದರ್ಜೆ (Junior ) | **800–00** | **35–00** | **835=00** |
| 2 | ಹಿರಿಯ ದರ್ಜೆ (Senior) | **900–00** | **35–00** | **935=00** |
| 3 | ವಿದ್ವತ್ ಪೂರ್ವ (Pre Vidwat) | **1000–00** | **35–00** | **1035=00** |
| 4 | ವಿದ್ವತ್ ದರ್ಜೆ ಅಂತಿಮ (Vidwat Final) | **1050–00** | **35–00** | **1085=00** |

**2012,2013&2014 ರ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳ ಶುಲ್ಕದ ವಿವರ**

| ಕ್ರ. ಸಂ | ಪರೀಕ್ಷೆಯ ಹೆಸರು | ಥಿಯರಿ–1 | ಥಿಯರಿ–2 | ಶ್ರವಣ/ದೃಶ್ಯ ಜ್ಞಾನ | ಎಲ್ಲಾ ಪ್ರಾಯೋಗಿಕ ವಿಷಯಗಳು ಸೇರಿದಂತೆ | ಫಲಿತಾಂಶ ತಿಳಿಸುವ/ ಲ್ಯಾಮಿನೇಷನ್ ಶುಲ್ಕ |
|---|---|---|---|---|---|---|
| 1 | ಕಿರಿಯ ದರ್ಜೆ (Junior ) | **200–00** | **–** | **100–00** | **500–00** | **35–00** |
| 2 | ಹಿರಿಯ ದರ್ಜೆ (Senior) | **200–00** | **200–00** | **–** | **500–00** | **35–00** |
| 3 | ವಿದ್ವತ್ ಪೂರ್ವ (Pre Vidwat) | **250–00** | **250–00** | **–** | **500–00** | **35–00** |
| 4 | ವಿದ್ವತ್ ದರ್ಜೆ ಅಂತಿಮ (Vidwat Final) | **275–00** | **275–00** | **–** | **500–00** | **35–00** |

**ಅಭ್ಯರ್ಥಿಗಳು ಅನುತ್ತೀರ್ಣರಾದ ಪತ್ರಿಕೆಗಳ ಪರೀಕ್ಷಾ ಶುಲ್ಕ ಹಾಗೂ ಫಲಿತಾಂಶ ತಿಳಿಸುವ ಮತ್ತು ಲ್ಯಾಮಿನೇಶನ್ ಶುಲ್ಕದ ಒಟ್ಟು ಮೊತ್ತವನ್ನು ಪಾವತಿಸುವುದು.**

- ಸಂಗೀತ ಶಾಲಾ ಶಿಕ್ಷಕರು/ ಸಾಮಾನ್ಯ ಖಾಸಗಿ ಅಭ್ಯರ್ಥಿಗಳು ಅರ್ಜಿ ಶುಲ್ಕ **ರೂ.100.00ನ್ನು** ನಗದು ರೂಪದಲ್ಲಿ ಪಾವತಿಸಿ ಪರೀಕ್ಷಾ ಕೇಂದ್ರದಲ್ಲಿ ಅರ್ಜಿಗಳನ್ನು ಪಡೆಯಬಹುದು.
- **ಎಸ್ ಸಿ/ಎಸ್ ಟಿ ಮತ್ತು ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ಮಾತ್ರ ವಿನಾಯಿತಿ ಇರುತ್ತದೆ. ಅರ್ಜಿಶುಲ್ಕ ರೂ.100–00 ಮತ್ತು ಫಲಿತಾಂಶ ತಿಳಿಸುವ ಹಾಗೂ ಲ್ಯಾಮಿನೇಶನ್ ಶುಲ್ಕ ರೂ.35.00 ಒಟ್ಟು ರೂ.135.00ನ್ನು ಕಡ್ಡಾಯವಾಗಿ ಪಾವತಿಸಬೇಕಾಗಿರುತ್ತದೆ.**

**ಪರೀಕ್ಷಾ ಪೂರ್ವ ಚಟುವಟಿಕೆಗಳು:**

ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ಪ್ರಸ್ತುತ ಅಕ್ಟೋಬರ್ ಮಾಹೆಯಲ್ಲಿ ನಡೆಸಲಾಗುತ್ತಿದೆ. ಜೂನ್ ಮಾಹೆಯಲ್ಲಿ ಪರೀಕ್ಷಾ ಕೇಂದ್ರಗಳ ರಚನೆ, ಕೇಂದ್ರದ ಮುಖ್ಯ ಅಧೀಕ್ಷಕರ ಹಾಗೂ ಆಯಾ ಕೇಂದ್ರಕ್ಕೆ ಜಿಲ್ಲಾ ಡಯಟ್ ಪ್ರಾಂಶುಪಾಲರು ನೇಮಕಮಾಡಿದ ನೋಡಲ್ ಅಧಿಕಾರಿಗಳ ಸಭೆ ಕರೆದು ಚರ್ಚಿಸಿ, ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ಓ.ಎಂ.ಆರ್. ಶೀಟ್‌ಗಳನ್ನು ನೀಡಲಾಗುವುದು.ಪರೀಕ್ಷಾ ಕೇಂದ್ರಗಳ ಬಗ್ಗೆ, ಪರೀಕ್ಷಾ ಕೇಂದ್ರಗಳಲ್ಲಿ ಯಾವ ಪರೀಕ್ಷೆಗಳಿಗೆ ಅರ್ಜಿ ಸ್ವೀಕರಿಸಲಾಗುತ್ತದೆ ಎಂಬ ಬಗ್ಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು, ನಿಗಧಿತ ಶುಲ್ಕದ ವಿವರವಿರುವ ಅಧಿಸೂಚನೆಯನ್ನು ಹೊರಡಿಸಲಾಗುವುದು.ಸದರಿ ಅಧಿಸೂಚನೆಯನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡಲಾಗುವುದು.ಈ ಬಗೆ ವ್ಯಾಪಕ ಪ್ರಚಾರ ಪಡಿಸುವ ಸಲುವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

ರಾಜ್ಯದ ಎಲ್ಲಾ ಕೇಂದ್ರಗಳಿಂದ ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲಿಸಿ ಗಣಕ ಯಂತ್ರದಲ್ಲಿ ಸ್ಕ್ಯಾನಿಂಗ್‌ಗೆ ಒಳಪಡಿಸಲಾಗುವುದು.ಸ್ಕ್ಯಾನಿಂಗ್ ಕಾರ್ಯ ಮುಗಿದ ನಂತರ ದೋಷಗಳಿದ್ದಲ್ಲಿ ಮತ್ತೊಮ್ಮೆ ಅಬ್ಯರ್ಥಿವಾರು ಪರಿಶೀಲಿಸಿ ಅಂತಿಮ ಅರ್ಹ ಅಭ್ಯರ್ಥಿಗಳ ಪಟ್ಟಿ ಪಡೆಯಲಾಗುವುದು.

ಗಣಕ ಶಾಖೆಯಿಂದ ಕೇಂದ್ರವಾರು, ವಿಷಯವಾರು ನಾಮಿನಲ್ ರೋಲ್ ಪಡೆಯುವುದು.ಇದರ ಆಧಾರದ ಮೇಲೆ ಅಭ್ಯರ್ಥಿಗಳ ಕೇಂದ್ರವಾರು ಸಂಖ್ಯೆಗನುಗುಣವಾಗಿ ಪ್ರವೇಶ ಪತ್ರಗಳನ್ನು, ನಾಮಿನಲ್ ರೋಲ್ ಮತ್ತು ಕೇಂದ್ರವಾರು ನಾಮಿನಲ್ ರೋಲ್‌ಗಳನ್ನು ಪರೀಕ್ಷಾ ಕೇಂದ್ರಗಳಿಗೆ ರವಾನಿಸಲಾಗುವುದು.

ಪರೀಕ್ಷಾ ಕೇಂದ್ರಗಳಲ್ಲಿ ನೋಂದಾಯಿಸಿರುವ ಅಭ್ಯರ್ಥಿಗಳ ಆಧಾರದ ಮೇಲೆ ಮಂಡಳಿಯಲ್ಲಿ ಪರೀಕ್ಷಕರಾಗಿ ನೋಂದಾಯಿಸಿಕೊಂಡಿರುವ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಶಿಕ್ಷಕರನ್ನು ಅವರ ಸೇವಾ ಹಿರಿತನ ಆಧರಿಸಿ ಪ್ರಾಯೋಗಿಕ ಪರೀಕ್ಷಕರನ್ನು ನೇಮಕ ಮಾಡಲಾಗುವುದು. ಉತ್ತರ ಪತ್ರಿಕೆಗಳ ಮೌಲ್ಯಮಾಪಕರನ್ನು ಸಹ ಇದೇ ರೀತಿ ಅಗತ್ಯತೆಗನುಗುಣವಾಗಿ ನೇಮಕಮಾಡಿ ಆದೇಶಗಳನ್ನು ಮಂಡಳಿಯಿಂದ ಕಳುಹಿಸಲಾಗುವುದು.

**ಅಭ್ಯರ್ಥಿಗಳಿಗೆ ವಿತರಿಸಲಾದ ಓ.ಎಂ.ಆರ್ (OMR) (Optical Mark Reader) ಭರ್ತಿ ಮಾಡುವ ಬಗ್ಗೆ ಸಾಮಾನ್ಯ ಸೂಚನೆಗಳು**

- ಓ.ಎಂ.ಆರ್.ನ್ನು ಜೆರಾಕ್ಸ್ ಮಾಡಿ ಮೊದಲು ಅದರಲ್ಲಿ ಭರ್ತಿ ಮಾಡಿ ನಂತರ ಮೂಲ ಓ.ಎಂ.ಆರ್.ಶೀಟ್‌ನಲ್ಲಿ ಜಾಗರೂಕತೆಯಿಂದ ಭರ್ತಿ ಮಾಡತಕ್ಕದ್ದು. **ಓ.ಎಂ.ಆರ್ ನಲ್ಲಿ ಸಂಗೀತ ಶಾಲೆಯ ಶಿಕ್ಷಕರು ಸಹಿ ಮಾಡಬಾರದು. ಪರೀಕ್ಷಾ ಕೇಂದ್ರದ ಮುಖ್ಯಸ್ಥರೇ ದೃಢೀಕರಿಸಬೇಕು.**

- ಅಭ್ಯರ್ಥಿಯು ತನ್ನ ವಾಸಸ್ಥಳದಿಂದ ತುಂಬಾ ಹತ್ತಿರದಲ್ಲಿರುವ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಅರ್ಜಿಸಲ್ಲಿಸುವುದರ ಜೊತೆಗೆ ಅಲ್ಲಿಯೇ ಪರೀಕ್ಷೆ ತೆಗೆದುಕೊಳ್ಳಬೇಕು. (ವಾಸಸ್ಥಳದ ಗುರುತಿಗಾಗಿ ಆದಾರ್ ಕಾರ್ಡ್/ರೇಷನ್ ಕಾರ್ಡ್/ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ಶಾಲಾಮುಖ್ಯಸ್ಥರಿಂದ ಪಡೆದ ಪ್ರಮಾಣಪತ್ರ ಯಾವುದಾದರೂ ಒಂದು ಗುರುತಿನ ಚೀಟಿ ಸಲ್ಲಿಸತಕ್ಕದ್ದು.) ವಾಸಸ್ಥಳದಿಂದ ಹತ್ತಿರದಲ್ಲಿರುವ ಪರೀಕ್ಷಾಕೇಂದ್ರ ಬಿಟ್ಟು

ಬೇರೆ ಪರೀಕ್ಷಾ ಕೇಂದ್ರ ಗುರುತಿಸಿದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಹಾಜರಾಗಲಿರುವ ಪರೀಕ್ಷೆಯು ಸದರಿ ಪರೀಕ್ಷಾ ಕೇಂದ್ರದಲ್ಲಿ ಇಲ್ಲದಿದ್ದಾಗ ಮಾತ್ರ ಹತ್ತಿರದ ಪರೀಕ್ಷಾ ಕೇಂದ್ರಗಳನ್ನು ಗುರುತಿಸತಕ್ಕದ್ದು.

- ಓ.ಎಂ.ಆರ್ ಮೇಲೆ ಯಾವುದೇ ಅನಗತ್ಯ ಗುರುತುಗಳನ್ನು ಮಾಡಬಾರದು.

- ಓ.ಎಂ.ಆರ್ ಒಮ್ಮೆ ಶೇಡ್ (Shade) ಮಾಡಿದ ನಂತರ ಯಾವುದೇ ಕಾರಣಕ್ಕೂ ಅಳಿಸಿ (Erase) ಭರ್ತಿ ಮಾಡಬಾರದು.

- ಓ.ಎಂ.ಆರ್‌ಗೆ ಗುಂಡು ಸೂಜಿ ಸಿಕ್ಕಿಸುವುದು, ಪಿನ್ ಹಾಕುವುದು, ಟ್ಯಾಗ್ ಮಾಡುವುದು, ಮಡಿಸುವುದು, ಒದ್ದೆಮಾಡುವುದು, ಗೀಚುವುದು, ಹರಿಯುವುದಾಗಲೀ ಮಾಡಬಾರದು. ಮತ್ತು ಗುರುತಿನ ಚೀಟಿಯನ್ನು ಓ.ಎಂ.ಆರ್‌ಗೆ ಪಿನ್ ಮಾಡಬಾರದು.

- ಓ.ಎಂ.ಆರ್. ನಲ್ಲಿನ ಎಲ್ಲಾ ಅಂಕಣಗಳನ್ನು ತಪ್ಪದೇ ಭರ್ತಿ ಮಾಡುವುದು.

- ಅಪೂರ್ಣ ಮಾಹಿತಿ ನೀಡಿದಲ್ಲಿ ಓ.ಎಂ.ಆರ್. ತಿರಸ್ಕರಿಸಲಾಗುವುದು.

- ಭರ್ತಿ ಮಾಡಿದ ಓ.ಎಂ.ಆರ್ ಶೀಟ್‌ನ್ನು ಛಾಯಾಪ್ರತಿ (Zerox) ಮಾಡಿಸಿಕೊಂಡು ತಮ್ಮಲ್ಲೇ ಉಳಿಸಿಕೊಳ್ಳುವುದು.

- ತಪ್ಪಾದ ಓ.ಎಂ.ಆರ್.ಗಳಿಗೆ ಒಂದು ಓ.ಎಂ.ಆರ್.ಗೆ ರೂ.100/-ರಂತೆ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಮಂಡಳಿಯ ಚಲನ್ ಮೂಲಕ ಪಾವತಿಸಿ, ಮೂಲಚಲನ ಅಭ್ಯರ್ಥಿ ಆಯ್ಕೆಮಾಡಿದ ಯಾವುದಾದರು ಒಂದು ಪರೀಕ್ಷಾ ಕೇಂದ್ರದಲ್ಲಿ ನೀಡಿ ಹೊಸ ಓ.ಎಂ.ಆರ್.ನ್ನು ಪಡೆಯುವುದು.

- ಓ.ಎಂ.ಆರ್ ನಲ್ಲಿ ವಿಷಯವನ್ನು ಸರಿಯಾಗಿ ಶೇಡ್ ಮಾಡುವುದು (ಎರಡು ವಿಷಯಗಳಿಗೆ ಶೇಡ್ ಮಾಡಿದರೆ, ಮತ್ತು ಜನ್ಮದಿನಾಂಕವನ್ನು ತಪ್ಪಾಗಿ ಶೇಡ್ ಮಾಡಿದಲ್ಲಿ ಅರ್ಜಿಯನ್ನು ಯಾವುದೇ ಸೂಚನೆಯಿಲ್ಲದೆ ತಿರಸ್ಕರಿಸಲಾಗುವುದು.

- ಅಕ್ಟೋಬರ್-2014ರಲ್ಲಿ ಕೆಲ ಅಭ್ಯರ್ಥಿಗಳು ಭರ್ತಿ ಮಾಡಿದ ಓ.ಎಂ.ಆರ್‌ನ್ನು ಕಲರ್ ಝೆರಾಕ್ಸ್ ಮಾಡಿ ನೀಡಿರುತ್ತಾರೆ. ಅಂತಹ ಪ್ರಕರಣಗಳು ಕಂಡುಬಂದಲ್ಲಿ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.

**ಪರೀಕ್ಷಾ ಅವಧಿ ಚಟುವಟಿಕೆಗಳು:**

ಶಾಸ್ತ್ರ ಪತ್ರಿಕೆ, ಶ್ರವಣ ಜ್ಞಾನ/ದೃಶ್ಯ ಜ್ಞಾನ ಮತ್ತು ಪ್ರಾಯೋಗಿಕ ಪತ್ರಿಕೆಗಳ Attendance Cum Marks List ಗಳನ್ನು ಮತ್ತು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಮತ್ತು ನೋಡಲ್ ಅಧಿಕಾರಿಗಳಿಗೆ ಶಾಸ್ತ್ರ ಪತ್ರಿಕೆ, ಶ್ರವಣ ಜ್ಞಾನ/ದೃಶ್ಯ ಜ್ಞಾನ ಮತ್ತು ಪ್ರಾಯೋಗಿಕ ಪತ್ರಿಕೆಗಳಿಗೆ ಸಂಬಂಧಿಸಿದಂತೆ ಸುತ್ತೋಲೆಗಳನ್ನು ಅಡಕಗೊಳಿಸಿ ಕೇಂದ್ರಗಳಿಗೆ ರವಾನಿಸಲಾಗುವುದು.

ನಂತರ ಕೇಂದ್ರವಾರು ಮತ್ತು ವಿಷಯವಾರು ಪ್ರಾಯೋಗಿಕ ಪರೀಕ್ಷಕರಿಗೆ ನೇಮಕಾತಿ ಆದೇಶವನ್ನು ರವಾನಿಸಲಾಗುವುದು. ಮತ್ತು ಥಿಯರಿ ಪತ್ರಿಕೆ ಮೌಲ್ಯಮಾಪನ ಕಾರ್ಯಕ್ಕಾಗಿ ವಿಷಯವಾರು ಮೌಲ್ಯಮಾಪಕರಿಗೆ ನೇಮಕಾತಿ ಆದೇಶಗಳನ್ನು ರವಾನಿಸಲಾಗುವುದು.

ಜೂನಿಯರ್ ವಿಭಾಗದ ಅಭ್ಯರ್ಥಿಗಳಿಗೆ ಒಂದು ದಿನದ ಶಾಸ್ತ್ರ ಪತ್ರಿಕೆ (ಥಿಯರಿ) ಹಾಗೂ 30 ನಿಮಿಷಗಳ ಶ್ರವಣ ಜ್ಞಾನ (ದೃಶ್ಯಜ್ಞಾನ ಭರತನಾಟ್ಯ ವಿದ್ಯಾರ್ಥಿಗಳಿಗೆ ಮಾತ್ರ) ಪರೀಕ್ಷೆ ನಡೆಸಲಾಗುವುದು. ಸೀನಿಯರ್ ವಿಭಾಗ, ವಿದ್ವತ್ ಪೂರ್ವ ಮತ್ತು ವಿದ್ವತ್ ಅಂತಿಮ ವಿಭಾಗದ ಅಭ್ಯರ್ಥಿಗಳಿಗೆ ಶಾಸ್ತ್ರ-1 ಮತ್ತು ಶಾಸ್ತ್ರ-2 ಥಿಯರಿ ಪರೀಕ್ಷೆ ನಡೆಸಲಾಗುವುದು.

ಪ್ರಾಯೋಗಿಕ ಪರೀಕ್ಷೆಗೆ ಆಯಾ ಕೇಂದ್ರದಲ್ಲಿ ವಿಷಯವಾರು ನೋಂದಾಯಿಸಿರುವ ಅಭ್ಯರ್ಥಿಗಳ ಆಧಾರದ ಮೇಲೆ ಪರೀಕ್ಷಕರ ನೇಮಕಾತಿ ಮಾಡಲಾಗುವುದು.ಒಂದು ಬೋರ್ಡ್ ನಲ್ಲಿ 3 ಜನ ಪರೀಕ್ಷಕರಿದ್ದು ಅವರುಗಳಲ್ಲಿ ಒಬ್ಬರು ಅಧ್ಯಕ್ಷರಾಗಿ ಕೆಲಸ ನಿರ್ವಹಿಸುವರು. ಅಭ್ಯರ್ಥಿಯು ಪ್ರಾಯೋಗಿಕ ಪರೀಕ್ಷೆಯಲ್ಲಿ ಹಾಡಿದ/ನೃತ್ಯ ಮಾಡಿದ ಬಗ್ಗೆ ಸೂಕ್ಷ್ಮವಾಗಿ ಗಮನಿಸಿ ಪ್ರತಿ ಪರೀಕ್ಷಕರು ವೈಯಕಿಕ ಅಂಕತ:ಖ್ತೆಯಲ್ಲಿ ಅಂಕಗಳನ್ನು ನಮೂದಿಸುತ್ತಾರೆ. ನಂತರ ಮೂವರು ಪರೀಕ್ಷಕರ ಅಂಕಗಳನ್ನು ಬೋರ್ಡಿನ ಅಧ್ಯಕ್ಷರು ಕ್ರೋಢೀಕರಿಸಿ ಸರಾಸರಿ ಅಂಕಗಳನ್ನು ಕ್ರೋಢಿಕೃತ ಅಂಕತ:ಖ್ತೆಗೆ ನಮೂದಿಸುತ್ತಾರೆ. ಈ ಅಂಕಗಳನ್ನು ಮಂಡಳಿಯಿಂದ ಪೂರೈಸಲಾಗುವ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯುಳ್ಳ ಎ.ಎಂ.ಎಲ್(Attendance Cum Marks List) ನಲ್ಲಿ ನಮೂದಿಸಲಾಗುವುದು.

ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಿಸಿದಂತೆ ಜ್ಯೂನಿಯರ್ ವಿಭಾಗದಲ್ಲಿ ಪ್ರತಿ ದಿನ ಪ್ರತಿ ಮಂಡಳಿಯವರು 8 ಅಭ್ಯರ್ಥಿಗಳಿಗೆ, ಸೀನಿಯರ್ ವಿಭಾಗದಲ್ಲಿ ಹಾಗೂ ವಿದ್ವತ್ ಪೂರ್ವ ವಿಭಾಗದಲ್ಲಿ 4 ಅಭ್ಯರ್ಥಿಗಳಿಗೆ ಮತ್ತು ವಿದ್ವತ್ ಅಂತಿಮ ವಿಭಾಗದಲ್ಲಿ 3 ಅಭ್ಯರ್ಥಿಗಳಿಗೆ ಪರೀಕ್ಷೆ ನಡೆಸಲಾಗುವುದು.

ವಿದ್ವತ್ ಅಂತಿಮ ಪ್ರಾಯೋಗಿಕ ಪರೀಕ್ಷೆಯ ಪತ್ರಿಕೆ–2ರ ಭಾಗ–1 ಕ್ಕೆ ಸಂಬಂಧಿಸಿದಂತೆ ಪರೀಕ್ಷಾರ್ಥಿಯು ಸಭಿಕರ ಸಮ್ಮುಖದಲ್ಲಿ ಗಾಯನ/ನೃತ್ಯ ಪ್ರದರ್ಶನ(ಮಂಚ ಪ್ರದರ್ಶನ) ನೀಡಬೇಕಾಗುತ್ತದೆ.

ಪ್ರತಿ ವಿಧ್ಯಾರ್ಥಿಯು ತನ್ನ ಪರೀಕ್ಷೆಗೆ ಅಗತ್ಯವಾದ ವಾದ್ಯ ಸಾಧನಗಳನ್ನು ತಾನೇ ಒದಗಿಸಿಕೊಳ್ಳಬೇಕು.

ಶಾಸ್ತ್ರ ವಿಭಾಗದ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಿಸಲು ಅಂಧ ಅಭ್ಯರ್ಥಿಗಳು ಬರವಣಿಗೆಗಾಗಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರ ಪೂರ್ವಾನುಮತಿ ಪಡೆದು ಇನ್ನೊಬ್ಬರ ಸಹಾಯವನ್ನು ಪಡೆಯಬಹುದಾಗಿದೆ.ಸಹಾಯಕರು ಸಂಬಂಧಿಸಿದ ಪರೀಕ್ಷೆಯ ಅಭ್ಯರ್ಥಿಯಾಗಿರಬಾರದು.ಸಂಬಂಧಿಸಿದ ದಾಖಲೆಗಳನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಮತ್ತು ಮಂಡಳಿಗೆ ಒಂದು ಪ್ರತಿಯನ್ನು ಸಲ್ಲಿಸುವುದು.

**<u>ಉತ್ತರಪತ್ರಿಕೆಗಳು:</u>**

ಪರೀಕ್ಷೆಗಳು ಮುಗಿದ ದಿನದಂದೇ ಆಯಾ ದಿವಸದ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ವಿಷಯವಾರು ಬಂಡಲ್ ಗಳನ್ನು ಮಾಡಿ ಮಂಡಳಿಯಿಂದ ನಿಗಧಿಪಡಿಸಿದ ಉತ್ತರ ಪತ್ರಿಕೆ ಮೌಲ್ಯಮಾಪನ ಕೇಂದ್ರಗಳಿಗೆ ರವಾನಿಸುವುದು. ಮೌಲ್ಯಮಾಪನ ಕೇಂದ್ರದಲ್ಲಿ ಕ್ಯಾಂಪ್ ಕಸ್ಟೋಡಿಯನ್ ರವರು ಉತ್ತರ ಪತ್ರಿಕೆ ಬಂಡಲ್ ಗಳನ್ನು ಸ್ವೀಕರಿಸಿ ವಿಷಯವಾರು, ಪತ್ರಿಕೆವಾರು ಕ್ರಮವಾಗಿಟ್ಟುಕೊಂಡು ಮೌಲ್ಯಮಾಪನ ಕೇಂದ್ರಕ್ಕೆ ಜಂಟಿಮುಖ್ಯ ಪರೀಕ್ಷಕರು ಹಾಜರಾದ ದಿನದಂದು ಅವರಿಗೆ ಉಸ್ತುವಾರಿ ವಹಿಸುವುದು.ನಂತರ ಮೌಲ್ಯಮಾಪಕರಿಗೆ ನಿಯಮಾನುಸಾರ ವಿತರಿಸಿ ಮೌಲ್ಯಮಾಪನ ಮಾಡಿಸಲಾಗುವುದು.

**<u>ಪರೀಕ್ಷಾ ನಂತರದ ಚಟುವಟಿಕೆಗಳು:</u>**

ಥಿಯರಿ ಪರೀಕ್ಷೆಗಳು ಮುಗಿದನಂತರ ಥಿಯರಿ ಪತ್ರಿಕೆಯ ಮೌಲ್ಯಮಾಪನ ಕಾರ್ಯವನ್ನು ಮುಗಿಸಿ, ಅಂಕಗಳನ್ನು ನಮೂದಿಸಿದ(ಶೇಡ್) Attendance Cum Marks List (AML) ಗಳನ್ನು ಗಣಕಯಂತ್ರದಲ್ಲಿ ಸ್ಕಾನಿಂಗ್ ಕಾರ್ಯಗಳಿಗೆ ಒಳಪಡಿಸಲಾಗುವುದು.ಪ್ರಾಯೋಗಿಕ ಪರೀಕ್ಷೆಯ ಬೋರ್ಡಿನ ಅಧ್ಯಕ್ಷರು ಅಭ್ಯರ್ಥಿ ಪಡೆದ ಅಂಕಗಳನ್ನು ನಮೂದಿಸಿ ಕಳುಹಿಸಿರುವAttendance Cum Marks List (AML) ಗಳನ್ನು ಸ್ಕ್ಯಾನಿಂಗ್ ಮಾಡಿ ಅಂಕಗಳನ್ನು ಕೋಢೀಕರಿಸಿದ ನಂತರ ದೋಷಗಳಿದ್ದಲ್ಲಿ ಮತ್ತೊಮ್ಮೆ ಅಭ್ಯರ್ಥಿವಾರು ಪರಿಶೀಲಿಸಿ ಅಂತಿಮ ಫಲಿತಾಂಶ ಪಟ್ಟಿ ಪಡೆಯಲಾಗುವುದು.ಮತ್ತು ಫಲಿತಾಂಶವನ್ನು ಪ್ರಕಟಣೆಗಾಗಿಕೇಂದ್ರವಾರು ರವಾನಿಸಲಾಗುವುದು.ಮತ್ತು ಮಂಡಳಿಯ ವೆಬ್ ಸೈಟ್‌ನಲ್ಲಿಯೂ ಫಲಿತಾಂಶವನ್ನು ಅಳವಡಿಸಲಾಗುವುದು.

**ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಉತ್ತರ ಪತ್ರಿಕೆಗಳ ಮರುಎಣಿಕೆಗಾಗಿ, ಛಾಯಾಪ್ರತಿಗಾಗಿ ಮತ್ತು ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವುದರ ಕುರಿತು ವಿವರ:**

1. ನೇರವಾಗಿ ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಿದಲ್ಲಿ ಉತ್ತರ ಪತ್ರಿಕೆಯ ಛಾಯಾಪ್ರತಿ ಪಡೆಯಲು ಹಾಗೂ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ.
2. ಉತ್ತರ ಪತ್ರಿಕೆಯ ಛಾಯಾಪ್ರತಿ ಪಡೆದವರಿಗೆ ಮಾತ್ರ ಮರು ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗಿದೆ.
3. ಉತ್ತರ ಪತ್ರಿಕೆಯ ಛಾಯಾ ಪ್ರತಿ ಅಭ್ಯರ್ಥಿಗೆ/ಅರ್ಜಿದಾರರಿಗೆ ತಲುಪಿದ 07 ದಿನಗಳೊಳಗಾಗಿ ಮರುಮೌಲ್ಯಮಾಪನ ಕೋರಿ ನಿಗದಿತ ಶುಲ್ಕ ಪಾವತಿಸಿ ಮಂಡಳಿಯಿಂದ ಕಳುಹಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸುವುದು.
4. ಈ ಜ್ಞಾಪನದೊಂದಿಗೆ ಲಗತ್ತಿಸಿರುವ ಇತರೆ ಪರೀಕ್ಷೆಗಳ ವಿಭಾಗದ **NEFT**ಚಲನ್ ಮೂಲಕ ಹಣವನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಿ, ಚಲನ್ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

**ಮರು ಎಣಿಕೆ / ಛಾಯಾ ಪ್ರತಿ / ಮರು ಮೌಲ್ಯಮಾಪನ ಶುಲ್ಕದ ವಿವರ ಕೆಳಕಂಡಂತಿರುತ್ತದೆ.**

| | | |
|---|---|---|
| 1. | ಮರು ಎಣಿಕೆ(ಲಿಖಿತ/ಪ್ರಾಯೋಗಿಕ ಪರೀಕ್ಷೆಗಳು) | ಒಂದು ವಿಷಯಕ್ಕೆ ಶುಲ್ಕ ರೂ.150–00 |
| 2. | ಉತ್ತರಪತ್ರಿಕೆ ಛಾಯಾಪ್ರತಿ(ಲಿಖಿತ ಪರೀಕ್ಷೆ ಮಾತ್ರ ) | ಒಂದು ವಿಷಯಕ್ಕೆ ಶುಲ್ಕ ರೂ.300–00 |
| 3. | ಛಾಯಾ ಪ್ರತಿ ಪಡೆದ ನಂತರ ಮರು ಮೌಲ್ಯಮಾಪನಕ್ಕೆ | ಒಂದು ವಿಷಯಕ್ಕೆ ಶುಲ್ಕ ರೂ.700–00 |

**ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಮೂಲ ಅಂಕಪಟ್ಟಿ ತಿದ್ದುಪಡಿ ಕುರಿತು ವಿವರ:**

ವಿಶೇಷ ಸಂಗೀತ ನೃತ್ಯ, ಹಾಗೂ ತಾಳವಾದ್ಯ ಪರೀಕ್ಷೆಯ ಅಂಕಪಟ್ಟಿಗಳಲ್ಲಿ ವಿದ್ಯಾರ್ಥಿ ಹೆಸರು, ತಂದೆಯ ಹೆಸರು, ತಿದ್ದುಪಡಿಗಳನ್ನು ಎಸ್ ಎಸ್ ಎಲ್ ಸಿ ಅಂಕಪಟ್ಟಿಯಲ್ಲಿರುವಂತೆ ಮಾಡಲಾಗುವುದು. ಪ್ರಸ್ತಾವನೆಯನ್ನು ಈ ಕೆಳಕಂಡ ದಾಖಲೆಗಳೊಂದಿಗೆ ಸಲ್ಲಿಸುವುದು.

**ಸಲ್ಲಿಸಬೇಕಾದ ದಾಖಲೆಗಳು:**

1) ಮೂಲ ಅಂಕಪಟ್ಟಿ.
2) ತಿದ್ದುಪಡಿ ಶುಲ್ಕ: ರೂ100/500.
3) ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಎಸ್ ಎಸ್ ಎಲ್ ಸಿ ಅಂಕಪಟ್ಟಿ.
4) ತಿದ್ದುಪಡಿ ಶುಲ್ಕವನ್ನು ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಮಂಡಳಿಯ ಇತರೆ ಪರೀಕ್ಷೆಗಳು ವಿಭಾಗಕ್ಕೆ ನೆಫ್ಟ್ ಚಲನ್ ಮೂಲಕ ಪಾವತಿಸಬೇಕು.

**ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಮೂಲ ಅಂಕಪಟ್ಟಿ ತಿದ್ದುಪಡಿ, ದ್ವಿತಿಯ ಅಂಕಪಟ್ಟಿ ಮತ್ತು ನೈಜತೆ ಪರಿಶೀಲನೆ ಬಗ್ಗೆ ಶುಲ್ಕಗಳ ಕುರಿತು ವಿವರ:**

| ಕ್ರ.ಸಂ | ದಾಖಲೆಗಳ ವಿವರ | ಶುಲ್ಕದ ವಿವರ | |
|---|---|---|---|
| | | ಸಾಮಾನ್ಯ ರೂ | ತುರ್ತು ರೂ |
| 1. | ತೇರ್ಗಡೆ ಪ್ರಮಾಣ ಪತ್ರ, ದ್ವೀತಿಯ ಪ್ರತಿ | 500/- | 1000/- |
| 2. | ತೇರ್ಗಡೆ ಪ್ರಮಾಣ ಪತ್ರ, ತೃತೀಯ ಪ್ರತಿ | 2000/- | 3000/- |
| 3. | ತೇರ್ಗಡೆ ಪ್ರಮಾಣ ಪತ್ರ, ನಾಲ್ಕನೇ ಪ್ರತಿ | 3000/- | 5000/- |
| 4. | ಪ್ರಮಾಣ ಪತ್ರಗಳ ನೈಜತೆ ಪರಿಶೀಲನೆ | 100/- | ಇಲ್ಲ |
| 5. | ಅಂಕಪಟ್ಟಿ ತಿದ್ದುಪಡಿ ಶುಲ್ಕ | 100/- | ಇಲ್ಲ |

**ಸಲ್ಲಿಸಬೇಕಾದ ದಾಖಲೆಗಳ ವಿವರ:**

1) ಪ್ರಮಾಣ ಪತ್ರ ನೈಜತೆ ಪರಿಶೀಲನೆಗಾಗಿ ಮೂಲ ಅಂಕಪಟ್ಟಿ ನಿಗಧಿತ ಶುಲ್ಕವನ್ನು ಪಾವತಿಸುವುದು.
2) ತೇರ್ಗಡೆ ಪ್ರಮಾಣ ಪತ್ರ, ದ್ವೀತಿಯ/ತೃತೀಯ/ನಾಲ್ಕನೇ ಪ್ರತಿ ಪಡೆಯಲು ಅಫಿಡವಿಟ್ ಮತ್ತು ನಿಗಧಿತ ಶುಲ್ಕವನ್ನು ಪಾವತಿಸುವುದು.

**2014ನೇ ಸಾಲಿನಲ್ಲಿ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳಿಗೆ ಹಾಜರಾದ/ತೇರ್ಗಡೆಯಾದ ಅಭ್ಯರ್ಥಿಗಳ ವಿವರ:**

| ಕ್ರ.ಸಂ | ವಿಷಯ | ವಿಷಯ ಸಂಕೇತ | ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ಸಂಖ್ಯೆ | ತೇರ್ಗಡೆಯಾದವರ ಸಂಖ್ಯೆ | ಶೇಕಡಾವಾರು ಫಲಿತಾಂಶ |
|---|---|---|---|---|---|
| 1 | Karnataka Music Junior Grade Vocal | MU01 | 3269 | 2966 | 90.73 |
| 2 | Karnataka Music Junior Grade Instrumental | MU02 | 271 | 237 | 87.45 |
| 3 | Karnataka Music Senior Grade Vocal | MU03 | 428 | 329 | 76.87 |
| 4 | Karnataka Music Senior Grade Instrumental | MU04 | 29 | 22 | 75.86 |
| 5 | Karnataka Music Vidwat Poorva Vocal | MU05 | 48 | 27 | 56.25 |
| 6 | Karnataka Music Vidwat Poorva Instrumental | MU06 | 07 | 04 | 57.14 |
| 7 | Karnataka Music Vidwat Final Vocal | MF07 | 25 | 23 | 92 |

| | | | | | |
|---|---|---|---|---|---|
| 8 | Karnataka Music Vidwat Final Instrumental | MF08 | 01 | 01 | 100 |
| 9 | Karnataka Talavadya Junior Grade Instrumental | MU12 | 79 | 65 | 82.28 |
| 10 | Karnataka Talavadya Senior Grade Instrumental | MU14 | 21 | 11 | 52.38 |
| 11 | Karnataka Talavadya Vidwat Poorva Instrumental | MU16 | 02 | 02 | 100 |
| 12 | Karnataka Talavadya Vidwat Final Instrumental | MF16 | 02 | 02 | 100 |
| 13 | Hindustani Music Junior Grade Vocal | MU21 | 671 | 593 | 88.38 |
| 14 | Hindustani Music Junior Grade Instrumental | MU22 | 29 | 24 | 82.76 |
| 15 | Hindustani Music Senior Grade Vocal | MU23 | 497 | 306 | 61.57 |
| 16 | Hindustani Music Senior Grade Instrumental | MU24 | 09 | 05 | 55.56 |
| 17 | Hindustani Music Vidwat Poorva Vocal | MU25 | 179 | 118 | 65.92 |
| 18 | Hindustani Music Vidwat Poorva Instrumental | MU26 | 02 | 01 | 50.00 |
| 19 | Hindustani Music Vidwat Final Vocal | MF27 | 226 | 183 | 80.97 |
| 20 | Hindustani Music Vidwat Final Instrumental | MF28 | 00 | 00 | 00 |
| 21 | Hindustani Talavadya Junior Grade Instrumental | MU32 | 237 | 220 | 92.83 |

| | | | | | |
|---|---|---|---|---|---|
| 22 | Hindustani Talavadya Senior Grade Instrumental | MU34 | 44 | 31 | 70.45 |
| 23 | Hindustani Talavadya Vidwat Poorva Instrumental | MU36 | 15 | 15 | 100 |
| 24 | Hindustani Talavadya Vidwat Final Instrumental | MF37 | 12 | 10 | 83.33 |
| 25 | Bharatanatyam Junior Grade | MU41 | 3547 | 3272 | 92.25 |
| 26 | Bharatanatyam Senior Grade | MU43 | 942 | 825 | 87.58 |
| 27 | Bharatanatyam Vidwat Poorva | MU45 | 197 | 159 | 80.71 |
| 28 | Bharatanatyam Vidwat Final | MU46 | 134 | 113 | 84.33 |
| 29 | Kathakali Dance Junior Grade | MK51 | 00 | 00 | 00 |
| 30 | Kathakali Dance Senior Grade | MK53 | 00 | 00 | 00 |
| 31 | Kathakali Dance Vidwat Poorva Grade | MK55 | 00 | 00 | 00 |
| 32 | Kathakali Dance Vidwat Final Grade | MK56 | 00 | 00 | 00 |
| 33 | Kuchupudi Dance Junior Grade | KU61 | 30 | 28 | 93.33 |
| 34 | Kuchupudi Dance Senior Grade | KU63 | 07 | 04 | 57.14 |
| 35 | Kuchupudi Dance Vidwat Poorva | KU65 | 01 | 01 | 100 |
| 36 | Kuchupudi Dance Vidwat Final | KU66 | 01 | 01 | 100 |
| 37 | Kathak Dance Junior Grade | KA71 | 43 | 38 | 88.37 |
| 38 | Kuchupudi Dance Senior Grade | KA73 | 01 | 01 | 100 |
| 39 | Kathak Dance Vidwat Poorva | KA75 | 01 | 00 | 00 |
| 40 | Kathak Dance Vidwat Final | KA76 | 01 | 01 | 100 |
| | **Total** | | **11008** | **9638** | **87.55** |

C:\Users\nic1\Desktop\web site document.docx

**ಪರೀಕ್ಷಕರ ನೋಂದಣಿ ಕುರಿತು:**

ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷಕರಾಗಿ ಮಂಡಳಿಯಲ್ಲಿ ನೋಂದಾಯಿಸಿಕೊಳ್ಳಲು ಆಯಾ ವಿಷಯದಲ್ಲಿ ಕನಿಷ್ಠ ಸೀನಿಯರ್ ವಿಭಾಗದಲ್ಲಿ ತೇರ್ಗಡೆಯಾಗಿರಬೇಕು. ನಿಗಧಿತ ಅರ್ಜಿಯ ಜೊತೆಗೆ ಹುಟ್ಟಿದ ದಿನಾಂಕದ ಬಗ್ಗೆ ದಾಖಲೆ, ವಿಳಾಸ ದೃಢೀಕರಣದ ದಾಖಲೆಗಳನ್ನು ಹಾಗೂ ಸಂಗೀತ/ನೃತ್ಯ /ತಾಳವಾದ್ಯ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ಬಗ್ಗೆ ಅಂಕಪಟ್ಟಿಗಳ ದೃಢೀಕೃತ ಪ್ರತಿಗಳನ್ನು ರೂ210=00 ನೋಂದಣಿ ಶುಲ್ಕ ಪಾವತಿಸಿರುವ ಬಗ್ಗೆ ಮೂಲ ನೆಫ್ಟ್ ಚೆಲನ್ ಸಮೇತ ಮಂಡಳಿಗೆ ಸಲ್ಲಿಸುವುದು.

**ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ವಿಷಯಗಳ ಪಠ್ಯವಸ್ತು :**

ಪ್ರಸ್ತುತ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳಲ್ಲಿ ಅನುಸರಿಸುತ್ತಿರುವ ಪಠ್ಯವಸ್ತುವಿಗೆ ಸಂಬಂಧಿಸಿದಂತೆ ಪಠ್ಯಪುಸ್ತಕ ನಿರ್ದೇಶನಾಲಯ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, #4, 100 ಅಡಿ ವರ್ತುಲ ರಸ್ತೆ, ಬನಶಂಕರಿ 3 ನೇ ಹಂತ, ಬೆಂಗಳೂರು–560085,ರವರ ವೆಬ್ ಸೈಟ್ ವಿಳಾಸ: www.ktbs.kar.nic.inರಲ್ಲಿ ಪಡೆಯಬಹುದಾಗಿದೆ.

**ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾಹಿತಿಗಳನ್ನು ಇದರೊಂದಿಗೆ ಅನುಬಂಧಿಸಿದೆ.**

1. ಅಧಿಸೂಚನೆ .
2. ಪರೀಕ್ಷಕರ ನೋಂದಣಿ ಅರ್ಜಿ.
3. ನೆಫ್ಟ್ ಚಲನ್.
4. 2013 ನೇ ಸಾಲಿನ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು.

-----

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3

ಸಂಖ್ಯೆ:ವಿ1/ವಿಸಪ/ಪ.ಕಾ/4/2015 ದಿನಾಂಕ:15.06.2015

## ಅ ಧಿ ಸೂ ಚ ನೆ

**ವಿಷಯ**: 2015ನೇ ಅಕ್ಟೋಬರ್ಮಾಹೆಯಲ್ಲಿ ನಡೆಯಲಿರುವ

ವಿಶೇಷ ಸಂಗೀತ/ನೃತ್ಯ ಮತ್ತು ತಾಳವಾದ್ಯ ಪರೀಕ್ಷೆಗಳಿಗೆ

ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ

**ಉಲ್ಲೇಖ**:1) ಸರ್ಕಾರಿ ಅದೇಶ ಸಂಖ್ಯೆ:ಇಡಿ-30ಎಸ್.ಎಲ್.ಬಿ.2011

ದಿನಾಂಕ:01.10.2012

2) ಸರ್ಕಾರಿ ಅದೇಶ ಸಂಖ್ಯೆ:ಇಡಿ-32ಎಸ್.ಎಲ್.ಬಿ.2013

ದಿನಾಂಕ:25.03.2013

3) ಸರ್ಕಾರಿ ಅದೇಶ ಸಂಖ್ಯೆ:ಇಡಿ-299 ಎಸ್.ಎಲ್.ಬಿ.2011, ಬೆಂಗಳೂರು

ದಿನಾಂಕ:08.07.2013.

4) ಸರ್ಕಾರದ ಆದೇಶ ಸಂಖ್ಯೆ: ಇಡಿ 299 ಎಸ್ ಎಲ್ ಬಿ 2011(ಭಾಗ).

ದಿನಾಂಕ:07.05.2015

******

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ನೋಂದಾಯಿಸಲ್ಪಟ್ಟು ಸಂಕೇತ ಸಂಖ್ಯೆ ಹೊಂದಿರುವ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಶಿಕ್ಷಕರಿಂದ (ಶಾಲೆಗಳಿಂದ) ತಾವು ಬೋಧಿಸಿರುವ ಅಭ್ಯರ್ಥಿಗಳಿಗೆ ಹಾಗೂ ಖಾಸಗಿ ಅಭ್ಯರ್ಥಿಗಳಿಂದಮಂಡಳಿಯು ನಿಗದಿಪಡಿಸಿದ ಪರೀಕ್ಷಾ ಕೇಂದ್ರಗಳ ಮೂಲಕ ಅಕ್ಟೋಬರ್/ನವೆಂಬರ್ 2015ನೇ ಸಾಲಿನಲ್ಲಿ ನಡೆಸಲಿರುವ ಶಾಸ್ತ್ರೀಯ ಸಂಗೀತ (ಕರ್ನಾಟಕ/ಹಿಂದೂಸ್ತಾನಿ) ಭರತನಾಟ್ಯ/ಕೂಚುಪುಡಿ/ಕಥಕ್ ಮತ್ತು ತಾಳವಾದ್ಯ (ಕರ್ನಾಟಕ/ಹಿಂದೂಸ್ತಾನಿ) ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪರೀಕ್ಷೆಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ, ನಿಗದಿತ ಪರೀಕ್ಷಾ ಶುಲ್ಕ ಮುಂತಾದ ವಿವರಗಳನ್ನು ಈ ಅಧಿಸೂಚನೆಯಲ್ಲಿ ಕೆಳಗೆ ನೀಡಲಾದ ನಿಯಮಗಳನ್ವಯ ಕ್ರಮಕೈಗೊಳ್ಳಲು ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ ತಿಳಿಸಲಾಗಿದೆ.

1. ಅಕ್ಟೋಬರ್/ನವೆಂಬರ್ 2015ರಲ್ಲಿ ಕಿರಿಯ ದರ್ಜೆ, ಹಿರಿಯ ದರ್ಜೆ, ವಿದ್ವತ್ ಪೂರ್ವ ಮತ್ತು ವಿದ್ವತ್ ಅಂತಿಮ ಸಂಗೀತ, ನೃತ್ಯ ಮತ್ತು ತಾಳವಾದ್ಯ ಪರೀಕ್ಷೆಗಳನ್ನು ನಡೆಸಲಾಗುವುದು. ಉಲ್ಲೇಖ(1)ರ ಸರ್ಕಾರದ ಆದೇಶದಂತೆಈ ಹಿಂದೆ 2014ರ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ಮತ್ತೆ ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ ಅಕ್ಟೋಬರ್/ನವೆಂಬರ್ 2015 ರಲ್ಲಿ ನಡೆಯಲಿರುವ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಯಾವುದೇ ಲಿಖಿತ ಪತ್ರಿಕೆಗಳಾದ ಶಾಸ್ತ್ರ ಪತ್ರಿಕೆ(ಥಿಯರಿ)

ಮತ್ತುಶ್ರವಣ/ದೃಶ್ಯ ಜ್ಞಾನ ಪತ್ರಿಕೆ ಬರೆಯಲು ಅವಕಾಶ ಕಲ್ಪಿಸಲಾಗಿದೆ. ಹಾಗೂ ಯಾವುದಾದರೂ ಒಂದು ಪ್ರಾಯೋಗಿಕ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿದ್ದರೂ ಸಹ ಎಲ್ಲಾ ಪ್ರಾಯೋಗಿಕ ಪತ್ರಿಕೆಗಳಿಗೆ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ.**ಈ ಸೌಲಭ್ಯ 2012&2013ರಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ. ಅದಕ್ಕೂ ಹಿಂದೆ ಅನುತ್ತೀರ್ಣರಾದ ಅಭ್ಯರ್ಥಿಗಳು ಒಂದು ವಿಷಯದಲ್ಲಿ ಅನುತ್ತೀರ್ಣರಾಗಿದ್ದರೂ ಎಲ್ಲಾ ವಿಷಯಗಳಿಗೂ ಪರೀಕ್ಷೆತೆಗೆದುಕೊಳ್ಳಬೇಕಾಗಿದ್ದು ಪರೀಕ್ಷಾ ಅರ್ಜಿ ಸಲ್ಲಿಸಬೇಕು.**

**ಅಕ್ಟೋಬರ್ 2012&2013 ರಲ್ಲಿ ಅನುತ್ತೀರ್ಣರಾದ ಎಲ್ಲಾ ಅಭ್ಯರ್ಥಿಗಳಿಗೆ MSA ಯನ್ನು(MSA- MARKS STATEMENT-CUM-APPLICATION) ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲಾಗಿದೆ. MSA ಯ ಪುಟ 1 ರಲ್ಲಿ ಅಭ್ಯರ್ಥಿಯ ವಿವರ ಹಾಗೂ** ಗಳಿಸಿದ ಅಂಕಗಳ ವಿವರ ಇರುತ್ತದೆ.ಪುಟ 2 ರಲ್ಲಿ ಅಭ್ಯರ್ಥಿಯು ತಾವು ಅನುತ್ತೀರ್ಣರಾದ ವಿಷಯಗಳಿಗೆ ನಿಗದಿತ ಕಾಲಂನಲ್ಲಿ ಅನುತ್ತೀರ್ಣ ಅಂಕಗಳನ್ನು ಭರ್ತಿ ಮಾಡುವುದು. ಹಾಗೂ ನಿಗದಿತ ಸ್ಥಳದಲ್ಲಿ ಫೋಟೋ ಅಂಟಿಸುವುದು.ಈ ವರ್ಷ ಪಾಠ ಹೇಳಿಕೊಟ್ಟಿರುವ ಶಿಕ್ಷಕರು**MSA**ಯಲ್ಲಿ ಅಗತ್ಯವಾದ ವಿವರಗಳನ್ನು ಮಾತ್ರ ಭರ್ತಿ ಮಾಡಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡುವುದು.**MSA ಯಲ್ಲಿ ಶಿಕ್ಷಕರು ತಮ್ಮ ಸಹಿ/ಸೀಲನ್ನು ಹಾಕಬಾರದು.MSA ಪರೀಶೀಲಿಸಿ ಸಹಿ ಮಾಡುವಕಾರ್ಯವನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ವಹಿಸಲಾಗಿದೆ.**ಪರೀಕ್ಷಾ ಕೇಂದ್ರದ ಮುಖ್ಯಸ್ಥರು **MSA**ಯನ್ನು ಪರಿಶೀಲಿಸಿ, ಪ್ರಮಾಣ ಪತ್ರವನ್ನು ಭರ್ತಿಮಾಡಿ ಸಹಿಮಾಡುವುದು.ಇದರೊಂದಿಗೆ 2012&2013ರ ಅನುತ್ತೀರ್ಣ ಅಂಕಪಟ್ಟಿಯ ಜೆರಾಕ್ಸ್ ಮತ್ತು ಅಭ್ಯರ್ಥಿಯ ವಿವರಗಳನ್ನು ಪ್ರತ್ಯೇಕ ನಾಮಪಟ್ಟಿಯಲ್ಲಿ ಬರೆದು ಒಂದು ಪ್ರತ್ಯೇಕ ಕವರ್‌ನಲ್ಲಿ ಸಲ್ಲಿಸಬೇಕು.ಪರೀಕ್ಷಾ ಕೇಂದ್ರದವರು ಎಲ್ಲಾಅನುತ್ತೀರ್ಣ ಅಭ್ಯರ್ಥಿಗಳ ದಾಖಲೆಗಳನ್ನು ಒಟ್ಟಿಗೆ ಒಂದು ಕವರ್‌ನಲ್ಲಿ ಹಾಕಿ ಮಂಡಳಿಗೆ ಸಲ್ಲಿಸುವುದು. ಇವರಿಗೆ ಮತ್ತೊಮ್ಮೆಓ.ಎಂ.ಆರ್.ತುಂಬುವ ಅವಶ್ಯಕತೆ ಇರುವುದಿಲ್ಲ.(ಅನುತ್ತೀರ್ಣ ಅಭ್ಯರ್ಥಿಗಳು 2012,2013ರಲ್ಲಿ ಪರೀಕ್ಷೆ ಬರೆದ ಕೇಂದ್ರದಲ್ಲಿಯೇ ಈ ಬಾರಿಯೂ ಅರ್ಜಿ ಸಲ್ಲಿಸುವುದು.)

2. ಸಂಗೀತ ಶಾಲಾ ಶಿಕ್ಷಕರು ಪರೀಕ್ಷೆಗೆ ಹಾಜರುಪಡಿಸುವ ಅಭ್ಯರ್ಥಿಗಳು ಸ್ಥಳೀಯವಾಗಿ ವಾಸವಾಗಿರುವ ಬಗ್ಗೆ ಆಧಾರ್ ಕಾರ್ಡ್/ರೇಷನ್ ಕಾರ್ಡ್/ವ್ಯಾಸಂಗ ಮಾಡುತ್ತಿರುವ ಶಾಲೆಯಿಂದ ಶಾಲಾ ಮುಖ್ಯಸ್ಥರು ನೀಡಿರುವ ವ್ಯಾಸಂಗ ಪ್ರಮಾಣ ಪತ್ರ ಇದರಲ್ಲಿ ಯಾವುದಾದರೂ ಒಂದುಗುರುತಿನ ಪ್ರಮಾಣಪತ್ರವನ್ನು ಅರ್ಜಿಗಳೊಂದಿಗೆ ಪ್ರತ್ಯೇಕವಾಗಿ ಬಂಡಲುಮಾಡಿ ಅರ್ಜಿಗಳ ಜೊತೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡುವುದು. ಖಾಸಗಿ ಅಭ್ಯರ್ಥಿಗಳು ಸಹ ಮೇಲಿನ ಯಾವುದಾದರು ಒಂದು ಗುರುತಿನ ಚೀಟಿಯನ್ನು ಪತ್ರಾಂಕಿತ ಅಧಿಕಾರಿಯಿಂದ ದೃಢೀಕರಿಸಿ ಅರ್ಜಿ ಜೊತೆಯಲ್ಲಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡಬೇಕು.

3. ಪರೀಕ್ಷಾ ಕೇಂದ್ರ ನಿಗಧಿಗೆ ಸಾಕಷ್ಟು ಅಭ್ಯರ್ಥಿಗಳು ಇಲ್ಲದೇ ಇದ್ದರೆ ಅಥವಾ ಇನ್ಯಾವುದೇ ಕಾರಣಕ್ಕಾಗಲಿ, ರಾಜ್ಯದ ಯಾವ ಪರೀಕ್ಷಾ ಕೇಂದ್ರವನ್ನಾದರೂ ರದ್ದುಪಡಿಸಲು ಮಂಡಳಿಯು ಪೂರ್ಣ ಅಧಿಕಾರವನ್ನು ಹೊಂದಿದೆ. ಅಂತಹ ಕೇಂದ್ರಗಳಿಗೆ ನೊಂದಾಯಿಸಲ್ಪಡುವ ಅಭ್ಯರ್ಥಿಗಳನ್ನು ಹತ್ತಿರದ ಕೇಂದ್ರಗಳಿಗೆ ವರ್ಗಾಯಿಸಲಾಗುವುದು.

4. ಸಂಗೀತ ಶಾಲಾ/ಶಿಕ್ಷಕರು ತಾವು ಸ್ವತ: ಬೋಧಿಸಿರುವ ವಿದ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರುಪಡಿಸುವುದು. ಬೇರೆ ಶಿಕ್ಷಕರ ವಿದ್ಯಾರ್ಥಿಗಳನ್ನು ತಮ್ಮ ಮೂಲಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರುಪಡಿಸಬಾರದಾಗಿ ತಿಳಿಸಿದೆ. **2014 ರಲ್ಲಿ ನಡೆದ ಪರೀಕ್ಷೆಯಂತೆ ಈ ಬಾರಿಯುಖಾಸಗಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳಲು ಇಚ್ಚಿಸುವ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದ ಮೂಲಕ ನೇರವಾಗಿ ಅರ್ಜಿ ಶುಲ್ಕ ಪಾವತಿಸಿ ಅರ್ಜಿಗಳನ್ನು ಪಡೆದು ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಚಲನ್ ಮೂಲಕ ಪರೀಕ್ಷಾ ಶುಲ್ಕದ ಹಣ ಪಾವತಿಸಿ ನಿಗದಿತ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಅರ್ಜಿಗಳೊಂದಿಗೆ ದಾಖಲೆಗಳನ್ನು ಸಲ್ಲಿಸಲು ಕೊನೆ ದಿನಾಂಕಗಳನ್ನು ಕೆಳಕಂಡಂತೆ ಗೊತ್ತುಪಡಿಸಿದೆ. ಓ.ಎಂ.ಆರ್ ನಲ್ಲಿ ಪರೀಕ್ಷಾ ಕೇಂದ್ರದ ಸಂಕೇತವನ್ನು ಮಾತ್ರ ಭರ್ತಿ ಮಾಡುವುದು.**

| | |
|---|---|
| ಪರೀಕ್ಷಾ ಕೇಂದ್ರಗಳಲ್ಲಿ ಅರ್ಜಿ ವಿತರಣೆ ಪ್ರಾರಂಭದ ದಿನಾಂಕ: | **01.07.2015** |
| ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳಿಂದ ಅರ್ಜಿಗಳನ್ನುಸ್ವೀಕರಿಸಲು ಕೊನೆಯ ದಿನಾಂಕ | **20.07.2015** |
| ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳಿಂದ ದಂಡದೊಂದಿಗೆ ಅರ್ಜಿಗಳನ್ನುಸ್ವೀಕರಿಸಲು ಕೊನೆಯ ದಿನಾಂಕ | **25.07.2015** |

| | |
|---|---|
| **ಪರೀಕ್ಷಾ ಕೇಂದ್ರದವರು ಶುಲ್ಕ ಪಾವತಿಸಿದ ಬಗ್ಗೆ ಮೂಲ ಬ್ಯಾಂಕ್ ಚಲನ್‌ಗಳ ಸಹಿತ ಅರ್ಜಿಗಳನ್ನು ಮಂಡಳಿಗೆ ರವಾನಿಸುವ ಕೊನೆಯ ದಿನಾಂಕ** | **29.07.2015** |

- **ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕದ ನಂತರ ಬಂದ ಅಭ್ಯರ್ಥಿಗಳಿಗೆ ಒಂದು ದಿನಕ್ಕೆ, ಒಂದು ಅಭ್ಯರ್ಥಿಗೆ ರೂ 150 ರಂತೆ ದಂಡ ಶುಲ್ಕ ಲೆಕ್ಕಾಚಾರ ಮಾಡಿ ಪರೀಕ್ಷಾ ಶುಲ್ಕದೊಂದಿಗೆ ಪಾವತಿಸುವುದು.**

ಪರೀಕ್ಷಾ ಅರ್ಜಿಗಳನ್ನುಶಾಲಾ/ಕಾಲೇಜು ಕಛೇರಿ ಸಮಯದಲ್ಲಿ ಮಾತ್ರನೀಡಲಾಗುವುದು ಮತ್ತು ಸ್ವೀಕರಿಸಲಾಗುವುದು.ನಿಗದಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಮಾನ್ಯ ಮಾಡುವುದಿಲ್ಲ.ಸಂಗೀತ ಶಾಲಾ ಶಿಕ್ಷಕರು ವಿದ್ಯಾರ್ಥಿಗಳ ಅರ್ಜಿಗಳನ್ನು ನಿಗದಿತ ದಿನಾಂಕಕ್ಕೆ ಮೊದಲೇ ಸಲ್ಲಿಸುವುದು ಸೂಕ್ತ.**2014 ರಲ್ಲಿ ನಡೆದ ಪರೀಕ್ಷೆಯಂತೆ ಈ ಬಾರಿಯುಯಾವುದೇ ಕಾರಣಕ್ಕೂ ಓ.ಎಂ.ಆರ್ ಗಳಲ್ಲಿ ಸಂಗೀತ ಶಾಲೆಯ ಶಿಕ್ಷಕರು ಸಹಿ ಮಾಡಬಾರದು, ಎಲ್ಲಾ ಪರೀಕ್ಷಾರ್ಥಿಗಳ ಓ.ಎಂ.ಆರ್ ಗಳಲ್ಲಿ ಪರೀಕ್ಷಾಕೇಂದ್ರದ ಮುಖ್ಯಸ್ಥರೇ ದೃಢೀಕರಿಸತಕ್ಕದ್ದು.**

**ನಿಗದಿತ ದಿನಾಂಕದೊಳಗೆ ಪರೀಕ್ಷಾ ಕೇಂದ್ರದವರು ಅರ್ಜಿಗಳನ್ನು ಎಲ್ಲಾ ದಾಖಲೆಗಳ ಸಮೇತ ಮಂಡಳಿಗೆ ಸಲ್ಲಿಸದಿದ್ದಲ್ಲಿ ಪ್ರತಿದಿನಕ್ಕೆ 100/- ರೂ ಗಳಂತೆ ದಂಡ ಪಾವತಿಸಬೇಕಾಗುತ್ತದೆ.**

5. ಖಾಸಗಿಯಾಗಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಮತ್ತು ಸಂಗೀತ ಶಿಕ್ಷಕರು ತಮ್ಮ ಮುಖಾಂತರ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಂದ ವಸೂಲಿ ಮಾಡಿದ **ಪರೀಕ್ಷಾ ಶುಲ್ಕವನ್ನು ಸಂಗೀತ, ನೃತ್ಯ ಹಾಗೂ ತಾಳವಾದ್ಯಕ್ಕೆ ನಿಗದಿಪಡಿಸಿದ ಕೇಂದ್ರದಲ್ಲಿ ಪರೀಕ್ಷೆ ಕುಳಿತುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮಂಡಳಿಯ ಬ್ಯಾಂಕ್ ಚಲನ್ ಮೂಲಕ** ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸಿ ಚಲನ್‌ನ ಮೂಲ ಪ್ರತಿಯನ್ನು, ನಾಮಪಟ್ಟಿ ಹಾಗೂ ತುಂಬಿದ ಓ.ಎಂ.ಆರ್. ಅರ್ಜಿಗಳನ್ನು, ಸಂಬಂಧಿಸಿದ ದಾಖಲೆಗಳನ್ನು ಕ್ರಮವಾಗಿ ಜೋಡಿಸಿ ಪ್ರತ್ಯೇಕ ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ ನಿಗದಿತ ದಿನಾಂಕಗಳ ಒಳಗೆತಪ್ಪದೇ **ಪರೀಕ್ಷಾ ಕೇಂದ್ರಕ್ಕೆ** ತಲುಪಿಸಬೇಕು. ಹಾಗೂ ಪರೀಕ್ಷಾ ಕೇಂದ್ರದವರು ಸದರಿ ಅರ್ಜಿಗಳನ್ನು ಪಡೆದು ಕ್ರೋಢೀಕರಿಸಿ ಮಂಡಳಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು. ತಡವಾಗಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.ಖಾಲಿ ಚಲನ್ನು ಜೆರಾಕ್ಸ್ ಮಾಡಿಸಿಕೊಂಡು ಮುಂದಿನ ದಿನಗಳಲ್ಲಿ ಮಂಡಳಿಗೆ ಹಣ ಕಟ್ಟುವ ಸಂದರ್ಭದಲ್ಲಿ ಬಳಸಿಕೊಳ್ಳಬಹುದಾಗಿದೆ.ಪರೀಕ್ಷಾಕೇಂದ್ರದ ಮುಖ್ಯಸ್ಥರು ಸಂಗೀತ ಶಿಕ್ಷಕರಿಂದ ಅಥವಾ ಖಾಸಗಿಯಾಗಿ ಕಲಿತ ಅಭ್ಯರ್ಥಿಗಳಿಂದ ದೃಢೀಕೃತ ಗುರುತಿನಚೀಟಿ ಸಮೇತ ಅರ್ಜಿಗಳನ್ನು ಸ್ವೀಕರಿಸುವುದು.

**ಪರೀಕ್ಷಾ ಶುಲ್ಕದ ವಿವರ:-**

ಸಂಗೀತ ಶಾಲೆಯಿಂದ ಜೂನಿಯರ್/ಸೀನಿಯರ್ ಮತ್ತು ವಿದ್ವತ್ ಪೂರ್ವ/ವಿದ್ವತ್ ಅಂತಿಮ ಪರೀಕ್ಷೆಗೆ ಕುಳಿತ ಒಟ್ಟು ಅಭ್ಯರ್ಥಿಗಳ ಶುಲ್ಕವನ್ನು ಸಂಗ್ರಹಿಸಿ ಒಟ್ಟು ಪರೀಕ್ಷಾ ಶುಲ್ಕದ ಮೊತ್ತವನ್ನು**ಮಂಡಳಿಯ ಚಲನ್ ಮೂಲಕ ಪಾವತಿಸಿ ಮೂಲ ಪ್ರತಿಯನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸಲ್ಲಿಸಬೇಕು.**ಪರೀಕ್ಷಾ ಶುಲ್ಕ ಈ ಕೆಳಕಂಡಂತಿದೆ.

**2015ರಲ್ಲಿ ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳ ಶುಲ್ಕದ ವಿವರ**

| ಕ್ರಮ ಸಂಖ್ಯೆ | ಪರೀಕ್ಷೆಯ ಹೆಸರು | ಪರೀಕ್ಷಾ ಶುಲ್ಕರೂ. | ಫಲಿತಾಂಶತಿಳಿಸುವ/ಲಾ ್ಯಮಿನೇಷನ್‌ಶುಲ್ಕ ರೂ. | ಒಟ್ಟು ಶುಲ್ಕ ರೂ. |
|---|---|---|---|---|
| 1 | ಕಿರಿಯ ದರ್ಜೆ (Junior ) | **800–00** | **35–00** | **835=00** |
| 2 | ಹಿರಿಯ ದರ್ಜೆ (Senior) | **900–00** | **35–00** | **935=00** |
| 3 | ವಿದ್ವತ್ ಪೂರ್ವ (Pre Vidwat) | **1000–00** | **35–00** | **1035=00** |
| 4 | ವಿದ್ವತ್ ದರ್ಜೆ ಅಂತಿಮ (Vidwat Final) | **1050–00** | **35–00** | **1085=00** |

**<u>2012,2013&2014 ರ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳಶುಲ್ಕದ ವಿವರ</u>**

| ಕ್ರ. ಸಂ | ಪರೀಕ್ಷೆಯ ಹೆಸರು | ಥಿಯರಿ–1 | ಥಿಯರಿ–2 | ಶ್ರವಣ/ದೃಶ್ಯ ಜ್ಞಾನ | ಎಲ್ಲಾ ಪ್ರಾಯೋಗಿಕ ವಿಷಯಗಳು ಸೇರಿದಂತೆ | ಫಲಿತಾಂಶ ತಿಳಿಸುವ/ ಲ್ಯಾಮಿನೇಷನ್ ಶುಲ್ಕ |
|---|---|---|---|---|---|---|
| 1 | ಕಿರಿಯ ದರ್ಜೆ (Junior ) | **200–00** | **–** | **100–00** | **500–00** | **35–00** |
| 2 | ಹಿರಿಯ ದರ್ಜೆ (Senior) | **200–00** | **200–00** | **–** | **500–00** | **35–00** |
| 3 | ವಿದ್ವತ್ ಪೂರ್ವ (Pre Vidwat) | **250–00** | **250–00** | **–** | **500–00** | **35–00** |
| 4 | ವಿದ್ವತ್ ದರ್ಜೆ ಅಂತಿಮ (Vidwat Final) | **275–00** | **275–00** | **–** | **500–00** | **35–00** |

**ಅಭ್ಯರ್ಥಿಗಳು ಅನುತ್ತೀರ್ಣರಾದ ಪತ್ರಿಕೆಗಳ ಪರೀಕ್ಷಾ ಶುಲ್ಕ ಹಾಗೂ ಫಲಿತಾಂಶ ತಿಳಿಸುವ ಶುಲ್ಕದ ಒಟ್ಟು ಮೊತ್ತವನ್ನು ಪಾವತಿಸಬೇಕು.**

- ಸಂಗೀತ ಶಾಲಾ ಶಿಕ್ಷಕರು/ ಸಾಮಾನ್ಯ ಖಾಸಗಿ ಅಭ್ಯರ್ಥಿಗಳು ಅರ್ಜಿ ಶುಲ್ಕ **ರೂ.100.00ನ್ನು** ನಗದು ರೂಪದಲ್ಲಿ ಪಾವತಿಸಿ ಪರೀಕ್ಷಾ ಕೇಂದ್ರದಲ್ಲಿ ಅರ್ಜಿಗಳನ್ನು ಪಡೆಯಬಹುದು.
- **ಎಸ್ ಸಿ/ಎಸ್ ಟಿ ಮತ್ತು ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ಮಾತ್ರ ವಿನಾಯಿತಿ ಇರುತ್ತದೆ. ಅರ್ಜಿಶುಲ್ಕ ರೂ.100–00 ಮತ್ತು ಫಲಿತಾಂಶ ತಿಳಿಸುವ ಶುಲ್ಕರೂ.10.00 ಒಟ್ಟು ರೂ.110.00ನ್ನು ಕಡ್ಡಾಯವಾಗಿ ಪಾವತಿಸಬೇಕಾಗಿರುತ್ತದೆ.**
- **ಅಕ್ಟೋಬರ್–2012,2013&2014 ರಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಓ.ಎಂ.ಆರ್. ಅರ್ಜಿಗಳ ಬದಲಾಗಿ ಎಮ್.ಎಸ್.ಎ ಯನ್ನು ಕಳುಹಿಸಲಾಗಿದ್ದು, ಇದರಲ್ಲಿ ವಿವರವನ್ನು ಭರ್ತಿ ಮಾಡಿ,ಅನುತ್ತೀರ್ಣಗೊಂಡ ಜೆರಾಕ್ಸ್ ಅಂಕಪಟ್ಟಿಯೊಂದಿಗೆ ಸಲ್ಲಿಸಲು ತಿಳಿಸಿದೆ.**

6. ಪರೀಕ್ಷಾ ಕೇಂದ್ರವರು ನಿಮ್ಮ ಕೇಂದ್ರಕ್ಕೆ ಪರೀಕ್ಷೆ ಕಟ್ಟಲು ಬರುವ ಅಭ್ಯರ್ಥಿಗಳಿಂದ ಹಾಗೂ ಸಂಗೀತ ಶಿಕ್ಷಕರುಗಳಿಂದ ಒಂದು ಅರ್ಜಿಗೆ 100=00ಗಳಂತೆ ನಗದಾಗಿ ಪಡೆದುಕೊಳ್ಳುವುದು. ಅರ್ಜಿಶುಲ್ಕ 100–00 ರೂ ಗಳಲ್ಲಿ 40–00 ರೂ ಅಂಚೆ ವೆಚ್ಚ ಮತ್ತು ಸಂಗೀತ ಪರೀಕ್ಷಾ ಕಾರ್ಯನಿರ್ವಹಿಸುವ ಸಿಬ್ಬಂದಿಯ ಸಂಭಾವನೆಗೆ ಉಪಯೋಗಿಸುವುದು. ಈ ಬಗ್ಗೆ ದಾಖಲೆ ಕಾಯ್ದಿರಿಸುವುದು. ಬಾಕಿ 60–00ರೂಗಳನ್ನು ನಿಮ್ಮ ಪರೀಕ್ಷಾ ಕೇಂದ್ರದಲ್ಲಿ ಅರ್ಜಿ ತೆಗೆದುಕೊಂಡ ಅಭ್ಯರ್ಥಿಗಳ ಸಂಖ್ಯೆಗನುಗುಣವಾಗಿ ಹಣವನ್ನು ಮಂಡಳಿಯಿಂದ ಕಳುಹಿಸಿರುವ ಚಲನ್ ಮೂಲಕ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಿ ಮೂಲ ಪ್ರತಿಯನ್ನು ಮಂಡಳಿಗೆ ಕಳುಹಿಸುವುದು. ಒಮ್ಮೆ ಪಾವತಿಸಿದ ಹಣವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡುವುದಿಲ್ಲ.

7. ಓ.ಎಂ.ಆರ್. ಅರ್ಜಿಗಳನ್ನು ಗಣಕ ಯಂತ್ರಕ್ಕೆ ಅಳವಡಿಸುವುದರಿಂದ ಅರ್ಜಿಗಳನ್ನು **ಆಂಗ್ಲ ಭಾಷೆಯಲ್ಲಿ ದೊಡ್ಡ ಅಕ್ಷರದಲ್ಲಿಯೇ (CAPITAL LETTERS)** ತುಂಬಬೇಕು. ಯಾವುದೇ ಕಾರಣಕ್ಕೂ **ಅರ್ಜಿಗಳನ್ನು ಮಡಚಬಾರದು, ಸ್ಟೇಪ್ಲರ್ ಪಿನ್, ಗುಂಡು ಪಿನ್ ಬಳಸಬಾರದು.**ಸಂಗೀತ ಶಾಲೆ/ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ, ಮಂಡಳಿಗೆ ಕಳುಹಿಸುವಾಗ ಈ ಕೆಳಕಂಡ ಕ್ರಮಗಳನ್ನು ತಪ್ಪದೇ ಅನುಸರಿಸಬೇಕು.

   1. ಈ ವರ್ಷದ ಓ.ಎಂ.ಆರ್ ನಲ್ಲಿ ಶಿಕ್ಷಕರ ಕೋಡ್ ಸಂಕೇತ ಸಂಖ್ಯೆ ಕಾಲಂ ಇರುವುದಿಲ್ಲ, ಪರೀಕ್ಷಾ ಕೇಂದ್ರ ಸಂಖ್ಯೆ ಕಾಲಂ ಮಾತ್ರ ಇರುತ್ತದೆ. ಈ ಕಾಲಂನಲ್ಲಿ ಪರೀಕ್ಷಾರ್ಥಿಗಳಿಗೆ ಪರೀಕ್ಷೆಗೆ ಹಾಜರುಪಡಿಸುತ್ತಿರುವ ಸಂಬಂಧಿಸಿದ ಪರೀಕ್ಷಾ ಕೇಂದ್ರ ಸಂಖ್ಯೆಯನ್ನು(**CENTRE CODE**)ಪರೀಕ್ಷಾ ಕೇಂದ್ರ ಸಂಖ್ಯೆ ಕಾಲಂನಲ್ಲಿ ಭರ್ತಿಮಾಡಿ ಶೇಡ್‌ಮಾಡಬೇಕು.

2. ಓ.ಎಂ.ಆರ್. ಅರ್ಜಿಗಳನ್ನು ವಿಷಯವಾರು ಪ್ರತ್ಯೇಕವಾಗಿ ಜೋಡಿಸಬೇಕು.

3. ವಿಷಯವಾರು ನಾಮಾಂಕಿತ ಪಟ್ಟಿ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒಂದು ಕಡೆ ಪ್ರತ್ಯೇಕವಾಗಿ ಜೋಡಿಸಬೇಕು.

**4.ಯಾವುದೇ ಕಾರಣಕ್ಕೂ ಓ.ಎಂ.ಆರ್. ಅರ್ಜಿ ಹಾಗೂ ದಾಖಲೆ/ನಾಮಾಂಕಿತ ಪಟ್ಟಿಯನ್ನು ಒಟ್ಟಿಗೆ ಜೋಡಿಸಬಾರದು.**
ಅಭ್ಯರ್ಥಿಗಳು ತಮ್ಮ ವಾಸಸ್ಥಳದ ಹತ್ತಿರದಲ್ಲಿರುವ ಪರೀಕ್ಷಾಕೇಂದ್ರಗಳಲ್ಲಿಯೇ ಪರೀಕ್ಷೆಯನ್ನುತೆಗೆದುಕೊಳ್ಳಬೇಕು. ಅರ್ಜಿ ಜೊತೆಯಲ್ಲಿ ಎಲ್ಲಾ ಅಭ್ಯರ್ಥಿಗಳು ಸಹ ವಾಸಸ್ಥಳದ ಬಗ್ಗೆ ದೃಢೀಕೃತ ಗುರುತಿನಚೀಟಿ ನೀಡಬೇಕು.ಕೇಂದ್ರದ ಮುಖ್ಯಸ್ಥರು ಈ ಬಗ್ಗೆ ಅಗತ್ಯ ಕ್ರಮವಹಿಸುವುದು.

5.ಓ.ಎಂ.ಆರ್. ಅರ್ಜಿಗಳನ್ನು ಒಂದು ಪ್ರತ್ಯೇಕ ಕವರ್‌ನಲ್ಲಿ ಹಾಗೂ ದಾಖಲೆ/ನಾಮಾಂಕಿತ ಪಟ್ಟಿ ಎರಡನ್ನು ಒಂದು ಪ್ರತ್ಯೇಕ ಕವರ್‌ನಲ್ಲಿ ಸಲ್ಲಿಸುವುದು.

8. ಯಾವುದೇ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ಅರ್ಜಿಗಳನ್ನು ನೇರವಾಗಿ ಪರೀಕ್ಷಾ ಮಂಡಳಿಗೆ ಕಳುಹಿಸಬಾರದು. ಖಾಸಗಿಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳ ಮುಖಾಂತರ ಅರ್ಜಿಗಳನ್ನು ಪಡೆದು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ದಾಖಲೆಗಳು ಮತ್ತು ಶುಲ್ಕ ಸಮೇತ ನಿಗದಿತ ದಿನಾಂಕದೊಳಗೆ ಸಲ್ಲಿಸುವುದು. **ಎಲ್ಲಾ ಅರ್ಜಿಗಳಲ್ಲಿ ಪರೀಕ್ಷಾ ಕೇಂದ್ರದ ಸಂಕೇತ ಕಡ್ಡಾಯವಾಗಿ ನಮೂದಿಸಬೇಕು. ಹಾಗೂ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಕೇಂದ್ರದ ಸೀಲು ಸಮೇತ ಪ್ರತಿ ಅಭ್ಯರ್ಥಿಯ ಅರ್ಜಿಯಲ್ಲೂ ದೃಢೀಕರಿಸಬೇಕು.**

9. ಪಠ್ಯ ಕ್ರಮದಂತೆ ಒಂದು ವರ್ಷದಲ್ಲಿ ಅಭ್ಯರ್ಥಿಯು ಒಂದು ವಿಷಯದಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ.

10. ಪಠ್ಯಕ್ರಮದಂತೆ ಅಭ್ಯರ್ಥಿಗಳು ಯಾವುದೇ ಒಂದು ದರ್ಜೆಯ (ಗ್ರೇಡ್) ಹಾಡುಗಾರಿಕೆ ಮತ್ತು ವಾದ್ಯ ಸಂಗೀತ ಪರೀಕ್ಷೆಗಳಿಗೆ ಒಂದು ಬಾರಿಗೆ ಕುಳಿತುಕೊಳ್ಳಬಹುದು. ಆದರೆ ಈ ಎರಡು ಭಾಗಕ್ಕೆ ಬೇರೆ ಬೇರೆ ಅರ್ಜಿಯನ್ನು ಪರೀಕ್ಷಾ ಶುಲ್ಕದೊಡನೆ ಕಟ್ಟಿರಬೇಕು. ಯಾವ ಕಾರಣದಿಂದಲೂ ಒಬ್ಬ ಅಭ್ಯರ್ಥಿಯು ಬೇರೆ ಬೇರೆ ದರ್ಜೆಯ (ಗ್ರೇಡ್)

ಹಾಡುಗಾರಿಕೆ ಹಾಗೂ ವಾದ್ಯ ಸಂಗೀತ ಪರೀಕ್ಷೆಗಳಿಗೆ ಒಂದೇ ವರ್ಷದಲ್ಲಿ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಅಂತೆಯೇ ಹಾಡುಗಾರಿಕೆ ಅಥವಾ ವಾದ್ಯ ಸಂಗೀತದ ಪರೀಕ್ಷೆಯೊಂದಿಗೆ ತಾಳವಾದ್ಯ ಮತ್ತು ನೃತ್ಯದ ಪರೀಕ್ಷೆಗಳಿಗೆ ಜೊತೆಯಲ್ಲಿಯೇ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.

ಅಭ್ಯರ್ಥಿ ಎರಡು ವಿಷಯಗಳಿಗೆ ಹಾಜರಾಗುತ್ತಿದ್ದಲ್ಲಿ ಅಂತಹವರ ಪೂರ್ಣ ವಿವರವನ್ನು ಸಂಸ್ಥೆಯವರು ಹಾಗೂ ಖಾಸಗಿ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದವರಿಗೆ ನೀಡುವುದು.ಪರೀಕ್ಷಾ ಕೇಂದ್ರದವರು ಇಂತಹ ಎಲ್ಲಾ ಹೆಸರುಗಳನ್ನು ಒಂದು ಪುಸ್ತಕದಲ್ಲಿ ದಾಖಲಿಸಿಕೊಂಡು ನೋಂದಣಿಸಂಖ್ಯೆಯೊಂದಿಗೆ ಮಾಹಿತಿಯನ್ನು ಕಡ್ಡಾಯವಾಗಿ ಮಂಡಳಿಗೆ ಕಳುಹಿಸುವುದು.

11. ವಿವಿಧ ಪರೀಕ್ಷೆಗಳಿಗೆ ಕೆಳಕಂಡ ವಾದ್ಯಗಳನ್ನು ಮಾತ್ರ ನಿಗದಿಪಡಿಸಿದೆ.

| | |
|---|---|
| **ಅ) ಕರ್ನಾಟಕ ವಾದ್ಯ ಸಂಗೀತ** | ವೀಣೆ/ಪಿಟೀಲು/ಕೊಳಲು/ನಾದಸ್ವರ/ಗೋಟುವಾದ್ಯ/<br>ಕ್ಲಾರಿಯೋನೇಟ್/ಮ್ಯಾಂಡಲಿನ್/ಸ್ಯಾಕ್ಸ್‌ಪೋನ್ |
| **ಆ) ಹಿಂದೂಸ್ತಾನಿ ವಾದ್ಯ ಸಂಗೀತ** | ಪಿಟೀಲು/ಕೊಳಲು/ಬೀನ್/ಸಿತಾರ್/ಷಹನಾಯ್/ದಿಲ್‌ರುಬಾ/ಹಾರ್ಮೋನಿಯಂ/ಮೋಹನ್ ವೀಣಾ/ರುದ್ರವೀಣಾ/ಸಂತೂರ್/ಸರೋದ್/ಸಾರಂಗಿ |
| **ಇ) ಕರ್ನಾಟಕ ತಾಳವಾದ್ಯ** | ಮೃದಂಗ/ಖಂಜಿರ/ಘಟಂ/ ಮೋರ್ಚಿಂಗ್/ಡೋಲ್/ ಡೋಲಕ್ |
| **ಈ) ಹಿಂದೂಸ್ತಾನಿ ತಾಳವಾದ್ಯ** | ತಬಲ/ಪಕ್ವಾಜ್/ಡೋಲಕ್ |

**ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸುವ ಮುನ್ನ ಕೆಳಕಂಡ ಅಂಶಗಳನ್ನು ಗಮನಿಸತಕ್ಕದ್ದು.**

11(ಅ).ಪಠ್ಯಕ್ರಮದಂತೆ ಕಿರಿಯ ದರ್ಜೆ ಪರಿಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ದಿನಾಂಕ 01-03-2015ಕ್ಕೆ 10 ವರ್ಷ ತುಂಬಿರಬೇಕು. ಶಾಲಾ ಮುಖ್ಯಸ್ಥರಿಂದ ಪಡೆದ ಮೂಲ ದಾಖಲೆ ಪತ್ರ/ ವರ್ಗಾವಣೆ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿ/ಎಸ್.ಎಸ್.ಎಲ್.ಸಿ.ಪರೀಕ್ಷೆಯ ಪ್ರಮಾಣ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿಯನ್ನು ಅರ್ಜಿಯ ಜೊತೆ ಕಡ್ಡಾಯವಾಗಿ ಲಗತ್ತಿಸಲು ತಿಳಿಸಿದೆ.ಕನಿಷ್ಠ ಕನ್ನಡ ನಾಲ್ಕನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು. ಹಾಗೂ ಕಡ್ಡಾಯವಾಗಿ 10 ವರ್ಷ ತುಂಬಿರಲೇಬೇಕು.ಅಭ್ಯರ್ಥಿಯು ಕನ್ನಡದಲ್ಲಿ ವ್ಯವಹರಿಸಲು ನೈಪುಣ್ಯತೆ ಪಡೆದಿರುವ ಬಗ್ಗೆ ಸಕ್ಷಮ ಅಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದು ಅರ್ಜಿಯ ಜೊತೆಗೆ ಲಗತ್ತಿಸಬೇಕು.**ಪರೀಕ್ಷಾ ಕೇಂದ್ರದವರು ಜನ್ಮ ದಿನಾಂಕದ ಬಗ್ಗೆ ತಮ್ಮ ಹಂತದಲ್ಲೇ ಪರಿಶೀಲಿಸಿ ಕಡಿಮೆ ವಯಸ್ಸಿನ ವಿದ್ಯಾರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಿ ನಂತರವೇ ಮಂಡಳಿಗೆ ಕಳುಹಿಸುವುದು.ಹಿಂದಿನ ವರ್ಷಗಳಲ್ಲಿ ಇದೇ ಕಾರಣಕ್ಕೆ ಹಲವಾರು ಅರ್ಜಿಗಳು ತಿರಸ್ಕೃತಗೊಂಡಿವೆ.ಪರೀಕ್ಷಾಕೇಂದ್ರದವರು ಈ ಬಗ್ಗೆ ಎಚ್ಚರವಹಿಸುವುದು.**

11(ಆ).ಪಠ್ಯಕ್ರಮದಂತೆ ಹಿರಿಯ ದರ್ಜೆಗೆ ಅರ್ಜಿ ಸಲ್ಲಿಸಲು, ಕಿರಿಯ ದರ್ಜೆಯಲ್ಲಿ **ಉತ್ತೀರ್ಣರಾಗಿ 3 ವರ್ಷ ಆಗಿರಬೇಕು.** ಅಥವಾ 01.03.2015ಕ್ಕೆ ಸರಿಯಾಗಿ 17ವರ್ಷ ತುಂಬಿದ್ದು, ಅಭ್ಯರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಚಿಕವಾಗಿ ವ್ಯಾಸಂಗ ಮಾಡಿ (ಪಿ.ಯು.ಸಿ) ಪದವಿ ಪೂರ್ವ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ ನೇರವಾಗಿ ಹಿರಿಯ ದರ್ಜೆಗೆ ಕೂಡಲು ಅವಕಾಶವಿದೆ. ಸರ್ಕಾರದ ಆದೇಶ ಸಂಖ್ಯೆ ಇಡಿ-195-ಡಿಜಿಒ-2004 ಬೆಂಗಳೂರು, ದಿನಾಂಕ: 15.01.2005ರಂತೆ 01.03.2015ಕ್ಕೆ 18 ವರ್ಷ ಪೂರ್ಣಗೊಂಡ ಅಭ್ಯರ್ಥಿಗಳು ನೇರವಾಗಿ ಹಿರಿಯ ದರ್ಜೆ ಸಂಗೀತ/ನೃತ್ಯ ಹಾಗೂ ತಾಳವಾದ್ಯಪರೀಕ್ಷೆ ತೆಗೆದುಕೊಳ್ಳಬಹುದು. ಸದರಿ ಅಭ್ಯರ್ಥಿಗಳು ಪಾಠ ಮಾಡಿರುವ ಗುರುಗಳಿಂದ ಪರೀಕ್ಷೆಗೆ ನಿಗದಿಪಡಿಸಿದ ಪಠ್ಯ ವಸ್ತುವಿನ ಪಾಠ ಆಗಿರುವ ಬಗ್ಗೆ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಅರ್ಜಿ ಜೊತೆಗೆ ಲಗತ್ತಿಸಬೇಕು.

11(ಇ).ವಿದ್ವತ್ ಪೂರ್ವ ದರ್ಜೆಗೆ ಅರ್ಜಿ ಸಲ್ಲಿಸಲು ಹಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 3ವರ್ಷಗಳಾಗಿರಬೇಕು ಮತ್ತು ದಿನಾಂಕ: 01.03.2015 ಕ್ಕೆ ಸರಿಯಾಗಿ 19 ವರ್ಷ ತುಂಬಿರಬೇಕು. ದಿನಾಂಕ: 01.03.2015ಕ್ಕೆ 19ವರ್ಷ ಪೂರ್ಣಗೊಂಡಿರುವ ಅಭ್ಯರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಚಿಕವಾಗಿ ತೆಗೆದುಕೊಂಡು ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆ ವಿದ್ವತ್ ಪರೀಕ್ಷೆಗೆ ಕೂಡಬಹುದು. ವಿದ್ವತ್ ಪೂರ್ವ ಪರೀಕ್ಷೆ ಉತ್ತೀರ್ಣರಾದ ಒಂದು ವರ್ಷದ ನಂತರ ವಿದ್ವತ್ ಅಂತಿಮ

ಪರೀಕ್ಷೆಗೆ ಕೂಡಬಹುದು.**ಅಭ್ಯರ್ಥಿಗಳು ಹಿರಿಯ ಮತ್ತು ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ದರ್ಜೆ ಪರೀಕ್ಷೆಗಳಿಗೆ ಕಳುಹಿಸುವ ಅರ್ಜಿಗಳ ಜೊತೆಯಲ್ಲಿ ಹಿಂದಿನ ಪರೀಕ್ಷೆಯ ಅಂದರೆ ಕಿರಿಯ ಮತ್ತು ಹಿರಿಯ ದರ್ಜೆಯ ಹಾಗೂ ವಿದ್ವತ್ ಪೂರ್ವ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿಯ ದೃಢೀಕೃತಛಾಯಾ ಪ್ರತಿಗಳನ್ನು ಲಗತ್ತಿಸಬೇಕು.**

**ಸೀನಿಯರ್, ವಿದ್ವತ್ಪೂರ್ವ, ವಿದ್ವತ್ ಅಂತಿಮ ಪರೀಕ್ಷೆಗಳ ಅರ್ಜಿಗಳೊಂದಿಗೆ ಹಿಂದಿನ ಪರೀಕ್ಷೆಯ ಅಂಕಪಟ್ಟಿಗಳಲ್ಲಿ ಉತ್ತೀರ್ಣರಾದ ವರ್ಷವನ್ನು ಪರಿಶೀಲಿಸಿ ನಿಯಮಾನುಸಾರ ಅಭ್ಯರ್ಥಿಗಳು 2015ರ ಪರೀಕ್ಷೆ ಬರೆಯಲು ಅರ್ಹರೇ ಎಂದು ಪರಿಶೀಲಿಸಿದ ನಂತರವೇ ಅರ್ಜಿಗಳನ್ನು ಪರೀಕ್ಷಾ ಕೇಂದ್ರದವರು ಸ್ವೀಕರಿಸಲು ತಿಳಿಸಿದೆ.ಇಲ್ಲದಿದ್ದಲ್ಲಿ ತಮ್ಮ ಹಂತದಲ್ಲಿಯೇ ಅರ್ಜಿಗಳನ್ನು ತಿರಸ್ಕರಿಸುವುದು.**

11(ಈ)ಎಲ್ಲಾ ಅಭ್ಯರ್ಥಿಗಳು ತಮ್ಮ ವಾಸಸ್ಥಳಕ್ಕೆ ಅತ್ಯಂತ ಹತ್ತಿರದಲ್ಲಿರುವ ಪರೀಕ್ಷಾ ಕೇಂದ್ರಗಳಲ್ಲಿಯೇ ಪರೀಕ್ಷೆ ತೆಗೆದುಕೊಳ್ಳುವುದು.ವಾಸಸ್ಥಳದ ಬಗ್ಗೆ ಗುರುತಿನ ಚೀಟಿ /ಆಧಾರ್ ಕಾರ್ಡ್/ ರೇಷನ್ ಕಾರ್ಡ್/ಚುನಾವಣಾ ಗುರುತಿನ ಪತ್ರ/ಶಾಲಾ ವ್ಯಾಸಂಗ ಪ್ರಮಾಣ ಪತ್ರ ಇವುಗಳಲ್ಲಿ ಯಾವುದಾದರೂ ಒಂದು ಮಾಹಿತಿಯನ್ನು ಸ್ಥಳೀಯರೆಂದು ದೃಢಪಡಿಸಲುನೀಡುವುದು.(**ತಮ್ಮ ಜಿಲ್ಲೆಯಲ್ಲಿಯೇ ಪರೀಕ್ಷೆಗೆ ಹಾಜರಾಗತಕ್ಕದ್ದು.ಬೇರೆ ಜಿಲ್ಲೆಯಲ್ಲಿ ಅರ್ಜಿಯನ್ನು ಸಲ್ಲಿಸಿದಲ್ಲಿ ಅರ್ಜಿಯನ್ನು ಯಾವ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು.**)ತೆಗೆದುಕೊಳ್ಳಬೇಕಾದ ಪರೀಕ್ಷಾ ವಿಷಯಗಳ ಪರೀಕ್ಷೆಗೆ ಆ ಜಿಲ್ಲೆಯಲ್ಲಿ ಕೇಂದ್ರಗಳಿಲ್ಲದಿದ್ದರೆ ಮಾತ್ರ ಹತ್ತಿರದಲ್ಲಿಯ ಪರೀಕ್ಷಾ ಕೇಂದ್ರಗಳಲ್ಲಿ (ಆ ವಿಷಯದ ಪರೀಕ್ಷೆ ಇರುವ) ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗುವುದು.

12. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದ ವಿನಾಯಿತಿ ಇದೆ. ಪರೀಕ್ಷಾ ಶುಲ್ಕದಿಂದ ವಿನಾಯಿತಿ ಪಡೆಯಲು ಈ ವರ್ಗದ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಮೂಲಪ್ರಮಾಣ ಪತ್ರಗಳನ್ನು ಅರ್ಜಿಗಳ ಜೊತೆಗೆ ಲಗತ್ತಿಸಬೇಕು. ಹಾಗೆಯೇ ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ನೀಡಲಾಗುತ್ತದೆ. ಇಂತಹ ವಿದ್ಯಾರ್ಥಿಗಳು ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಮೂಲ ಪ್ರಮಾಣಪತ್ರಗಳನ್ನು ಅರ್ಜಿಯ ಜೊತೆಯಲ್ಲಿ ಲಗತ್ತಿಸಬೇಕು. ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

13.ಸಂಗೀತ ಶಾಲಾ ಶಿಕ್ಷಕರ ಮುಖಾಂತರ ಹಾಗೂ ಖಾಸಗಿಯಾಗಿ/ನೇರವಾಗಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಅರ್ಜಿಯನ್ನು ಪರೀಕ್ಷಾ ಕೇಂದ್ರಕ್ಕೆ ನೀಡುವ ಮುನ್ನ ಈ ಕೆಳಕಂಡ ಸೂಚನೆಗಳನ್ನು ತಪ್ಪದೆ ಎಚ್ಚರವಹಿಸಿ ಪಾಲಿಸತಕ್ಕದ್ದು.

ಅ) ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಕೇಂದ್ರದಲ್ಲಿ ನಡೆಯದೆ ಇರುವ ಪರೀಕ್ಷೆಯ ಅರ್ಜಿಗಳನ್ನು ಪಡೆದು ಮಂಡಳಿಗೆ ಕಳುಹಿಸಬಾರದು.ಒಂದು ಪಕ್ಷ ಕಳುಹಿಸಿದರೆ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.ಮುಂದಿನ ಆಗುಹೋಗುಗಳಿಗೆ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.ಅಭ್ಯರ್ಥಿಗಳು ಅರ್ಜಿ ಸಲ್ಲಿಸಲಿಚ್ಚಿಸುವ ಜಿಲ್ಲೆಯಲ್ಲಿರುವ ಪರೀಕ್ಷಾ ಕೇಂದ್ರಗಳಲ್ಲಿ ನಡೆಯದೇ ಇರುವ ವಿಷಯಗಳಿಗೆ ಪ್ರಸ್ತುತ ನಿಗಧಿಪಡಿಸಿರುವ ಯಾವುದಾದರೂ ಹತ್ತಿರದ ಪರೀಕ್ಷಾ ಕೇಂದ್ರದ ಮೂಲಕ ಅರ್ಜಿ ಸಲ್ಲಿಸಬೇಕು. ಸ್ಥಳೀಯ ಅಭ್ಯರ್ಥಿ ಎಂಬ ಬಗ್ಗೆ ಖಾತ್ರಿಯಾಗಲು ಕಂಡಿಕೆ 11 (ಈ) ರಲ್ಲಿ ತಿಳಿಸಿರುವಂತೆ ದೃಢೀಕೃತ ಗುರುತಿನ ಚೀಟಿ ಪಡೆದು ಮಂಡಳಿಗೆ ಸಲ್ಲಿಸಬೇಕು.

ಆ) ಅರ್ಜಿಗಳನ್ನು ವಿಷಯ ಮತ್ತು ದರ್ಜೆಗೆ ಅನುಸಾರವಾಗಿ ಜೋಡಿಸಿ, ಕಿರಿಯ ದರ್ಜೆ, ಹಿರಿಯ ದರ್ಜೆ, ವಿದ್ವತ್ ಪೂರ್ವ ಮತ್ತು ವಿದ್ವತ್ ಅಂತಿಮ ಬೇರೆ ಬೇರೆಯಾಗಿ ಹಾಡುಗಾರಿಕೆ, ಆಮೇಲೆ ತಾಳವಾದ್ಯ ನಂತರ ನೃತ್ಯ ಹೀಗೆ ಅನುಕ್ರಮವಾಗಿ ಪಟ್ಟಿ ಸಮೇತ ಮಂಡಳಿಗೆ ಸಲ್ಲಿಸಬೇಕು.

14.**ಅಭ್ಯರ್ಥಿಯ ಇತ್ತೀಚಿನ ಅಂದರೆ ಮೂರು ತಿಂಗಳ ಒಳಗೆ ತೆಗೆಸಿದ ಎರಡು ಭಾವಚಿತ್ರಗಳನ್ನು ಓ.ಎಂ.ಆರ್. ಅರ್ಜಿಯಲ್ಲಿ ತಪ್ಪದೇ ಅಂಟಿಸಿ.ಎರಡು ಭಾವಚಿತ್ರಗಳನ್ನು ಪ್ರತ್ಯೇಕವಾಗಿ ಕೇಂದ್ರಕ್ಕೆ ನೀಡುವುದು. ಅಭ್ಯರ್ಥಿಗಳ ಭಾವಚಿತ್ರವು ಸ್ಕ್ಯಾನಿಂಗ್ ಆಗುವುದರಿಂದಭಾವಚಿತ್ರದ ಹಿಂಪರದೆಯು ಮತ್ತು ಧರಿಸುವ ಉಡುಪು ಸಾದಾ ಬಣ್ಣಇರುವಂತೆಗಮನವಹಿಸುವುದು.**ಪರೀಕ್ಷಾ ಕೇಂದ್ರದವರು ಸಂಸ್ಥೆಯವರು ನೀಡಿದ ಎರಡು ಭಾವಚಿತ್ರಗಳನ್ನು ಕೇಂದ್ರದಲ್ಲೇ ಉಳಿಸಿಕೊಳ್ಳುವುದು.ಅದರಲ್ಲಿ ಒಂದು ಭಾವಚಿತ್ರವನ್ನು ಎ4 ಸೈಜ್ ಹಾಳೆಯ ಮೇಲೆ ಅಂಟಿಸಿ ಅಭ್ಯರ್ಥಿಯ ವಿವರ ಬರೆದು ಪುಸ್ತಕದಂತೆ ಸಿದ್ಧಪಡಿಸಿ ಕೇಂದ್ರದಲ್ಲಿ ಕಾಯ್ದಿರಿಸಿಕೊಳ್ಳುವುದು.ಇನ್ನೊಂದು ಭಾವಚಿತ್ರವನ್ನು ಪರೀಕ್ಷಾ ಕಾರ್ಯದ ಅಗತ್ಯಕ್ಕೆ ಅನುಗುಣವಾಗಿ ಬಳಸಿಕೊಳ್ಳುವುದು.

15. ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಖಾಸಗಿ ಅಭ್ಯರ್ಥಿಗಳಿಂದ ಮತ್ತು ನೋಂದಾಯಿತ ಸಂಗೀತ ಶಾಲಾ ಶಿಕ್ಷಕರುಗಳಿಂದ ಕಳುಹಿಸಿದ ಅಭ್ಯರ್ಥಿಗಳ ಸಂಪೂರ್ಣ ವಿವರ ಅಂದರೆ, ಅಭ್ಯರ್ಥಿಯ ಹೆಸರು/ತಂದೆಯಹೆಸರು/ಜನ್ಮ ದಿನಾಂಕ/ಪೂರ್ಣಅಂಚೆ ವಿಳಾಸ, ತೆಗೆದುಕೊಂಡಿರುವ ಪರೀಕ್ಷೆ ಮತ್ತು ದೂರವಾಣಿ ಸಂಖ್ಯೆ ಎಲ್ಲಾ ವಿವರಗಳನ್ನು ಒಂದು ದೊಡ್ಡ ನೊಂದಣಿ ಪುಸ್ತಕದಲ್ಲಿ ತಪ್ಪದೆ ನಮೂದಿಸಿಕೊಳ್ಳುವುದು.

16. ಹೊಸ ಪಠ್ಯ ಕ್ರಮದಲ್ಲಿ ಮೊದಲು ಪ್ರಾಯೋಗಿಕ ಪರೀಕ್ಷೆ ಪಾಸು ಮಾಡಿ ನಂತರದ ವರ್ಷದಲ್ಲಿ ಶಾಸ್ತ್ರ ಪರೀಕ್ಷೆಗೆ ಕುಳಿತು ಪಾಸು ಮಾಡಲು ಅವಕಾಶವಿರುವುದಿಲ್ಲ. ಅಂತಹ ಅರ್ಜಿಗಳನ್ನು ಶಾಲಾ ಹಂತದಲ್ಲಿಯೇ ತಿರಸ್ಕರಿಸಲು ತಿಳಿಸಿದೆ.

17.ಅಭ್ಯರ್ಥಿಗಳ ಪ್ರವೇಶ ಪತ್ರದಲ್ಲಿ ಮಂಡಳಿಯಿಂದ ನಿಗಧಿಪಡಿಸುವ ಪರೀಕ್ಷಾ ಕೇಂದ್ರದ ವಿಳಾಸದಲ್ಲಿಯೇ ಅಭ್ಯರ್ಥಿಗಳು ಶಾಸ್ತ್ರ ಪರೀಕ್ಷೆಗೆ ಹಾಗೂ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗತಕ್ಕದ್ದು.

18.ಓ.ಎಂ.ಆರ್‌ಗಳನ್ನು ಭರ್ತಿ ಮಾಡಿ ಮಂಡಳಿಗೆ ಕಳುಹಿಸಿದ ನಂತರ ವಿಷಯಸಂಕೇತ ಅಥವಾ ಪರೀಕ್ಷಾ ಕೇಂದ್ರದ ಬದಲಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ಪ್ರತಿ ತಪ್ಪಿಗೆ**ರೂ.500.00** ದಂಡ ವಿಧಿಸಲಾಗುವುದು. ಮಂಡಳಿಯ ಗಮನಕ್ಕೆ ತರದೇ ಪರೀಕ್ಷಾ ಕೇಂದ್ರದಲ್ಲೇ ಬದಲಾವಣೆ ಮಾಡಿಕೊಂಡಲ್ಲಿ ಮುಂದಿನ ಆಗುಹೋಗುಗಳಿಗೆ ಪರೀಕ್ಷಾ ಕೇಂದ್ರದವರೇ ಜವಾಬ್ದಾರರು.ಪರೀಕ್ಷಾ ಕೇಂದ್ರದ ಸಂಖ್ಯೆಯನ್ನು ಓ.ಎಂ.ಆರ್ ನಲ್ಲಿ ಶೇಡ್ ಮಾಡದಿದ್ದಲ್ಲಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರು/ಶಿಕ್ಷಕರು/ಅಭ್ಯರ್ಥಿಗಳೇ ಜವಾಬ್ದಾರರು.

19.ಓ.ಎಂ.ಆರ್‌ಗಳಲ್ಲಿ ವಿದ್ಯಾರ್ಥಿ/ತಂದೆ/ಇನ್ಯಾವುದೇ ವಿವರವನ್ನು ತಪ್ಪಾಗಿ ಶೇಡಿಂಗ್ ಮಾಡಿದ್ದಲ್ಲಿ ಸರಿಪಡಿಸಲು ಪ್ರತಿ ತಪ್ಪಿಗೆ**ರೂ.100.00**ದಂಡ ವಿಧಿಸಲಾಗುವುದು.ಸಂಸ್ಥೆಯವರು ಸಂಬಂಧಿಸಿದ ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು.

ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಸಂಗೀತ ಶಿಕ್ಷಕರು/ಖಾಸಗಿಅಭ್ಯರ್ಥಿಗಳು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ತೊಂದರೆಗಳಿಗೆ ಅಭ್ಯರ್ಥಿಗಳು ಮತ್ತು ಶಿಕ್ಷಕರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

C:\Users\nic1\Desktop\web site document.docx

20. ಅಕ್ಟೋಬರ್–2014ರ ಪರೀಕ್ಷೆಯಲ್ಲಿ ನೂರಾರು ಅಭ್ಯರ್ಥಿಗಳು ತಮ್ಮ ಓ.ಎಂ.ಆರ್ ನ್ನು ಭರ್ತಿಮಾಡುವಾಗ ಎರಡು ವಿಷಯಗಳಿಗೆ ಶೇಡ್ ಮಾಡಿದ್ದು ಅದನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಸರಿಪಡಿಸದೇ ಸಹಿ ಮಾಡೀಕಳುಹಿಸಿರುತ್ತಾರೆ. ಮಕ್ಕಳ ಹಿತದೃಷ್ಠಿಯಿಂದ ಎಲ್ಲರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಅವರು ಆಯ್ಕೆಮಾಡಿದ ವಿಷಯವನ್ನು ತಿಳಿದುಕೊಂಡು ಪುನ: ಗಣಕೀಕರಿಸಲಾಯಿತು. ಆದರೆ ಈ ಬಾರಿ ಎರಡು ವಿಷಯಗಳನ್ನು ಶೇಡ್ ಮಾಡುವುದು ಅಥವಾ ಯಾವುದೇ ವಿಷಯವನ್ನು ಶೇಡ್ ಮಾಡದೇ ಇರುವುದು ಮತ್ತು ಜನ್ಮದಿನಾಂಕವನ್ನು ತಪ್ಪಾಗಿ ಶೇಡ್ ಮಾಡುವುದು ಕಂಡುಬಂದಲ್ಲಿ ಯಾವುದೇ ಮೂನ್ಸೂಚನೆ ಇಲ್ಲದೇ ಅರ್ಜಿಯನ್ನು ತಿರಸ್ಕರಿಸಲಾಗುವುದು.

**<u>ವಿಶೇಷ ಸೂಚನೆಗಳು :</u>**

1) ಹಲವಾರು ಸಂಗೀತ ಶಿಕ್ಷಕರು ಇದುವರೆವಿಗೆ ಪರೀಕ್ಷಕರಾಗಿ ನೋಂದಾಯಿಸಿಕೊಳ್ಳದಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ. **ಭರತನಾಟ್ಯ, ಅತೀ ಮುಖ್ಯವಾಗಿ ತಾಳವಾದ್ಯ ಪರೀಕ್ಷೆಗಳಿಗೆ ಅತಿ ಕಡಿಮೆ ಸಂಖ್ಯೆಯಲ್ಲಿ ಶಿಕ್ಷಕರು ನೋಂದಣಿ ಮಾಡಿಕೊಂಡಿದ್ದು, ಪ್ರತಿ ವರ್ಷ ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ ಶಿಕ್ಷಕರ ನಿಯೋಜನೆಗೆ ತೀವ್ರ ಅಭಾವ ಉಂಟಾಗುತ್ತಿದೆ.** ಆದ್ದರಿಂದ ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಕಡ್ಡಾಯವಾಗಿ ನೋಂದಣಿ ಮಾಡಿಕೊಂಡು ಪ್ರಾಯೋಗಿಕ ಪರೀಕ್ಷೆಗಳು ಸುಗಮವಾಗಿ ನಡೆಸಲು ಮಂಡಳಿಗೆ ಪೂರ್ಣ ಸಹಕಾರ ನೀಡಲು ತಿಳಿಸಿದೆ.ಹಲವು ಅನುಭವಿ ಹಳೆ ನೋಂದಣಿ ಸಂಖ್ಯೆಯುಳ್ಳ ಶಿಕ್ಷಕರು ಮರು ನೋಂದಣಿ ಅರ್ಜಿ ಸಲ್ಲಿಸಲು ಕೋರಿದೆ. ವಿಳಾಸ ಬದಲಾವಣೆಯಾಗಿದ್ದಲ್ಲಿ ಮರುಟಪಾಲಿನಲ್ಲಿ ದಾಖಲೆ ಮತ್ತು ದೂರವಾಣಿ ಸಂಖ್ಯೆ ಸಮೇತ ಮಂಡಳಿಗೆ ಮಾಹಿತಿ ಸಲ್ಲಿಸುವುದು.

2) ಮುಂಬರುವ ಪರೀಕ್ಷೆಗಳಿಗೆ ಈ ಹಿಂದಿನಂತೆ ಪರೀಕ್ಷಾ ಕೇಂದ್ರಗಳನ್ನು ಸಂಪರ್ಕಿಸಿ ಅರ್ಜಿಗಳನ್ನು ಪಡೆಯಲು ತಿಳಿಸಿದೆ.

3) ಖಾಸಗಿ ಅಭ್ಯರ್ಥಿಗಳು ಹಾಗೂ ತಮ್ಮ ಮೂಲಕಸಂಗೀತ ಪರೀಕ್ಷೆಗೆ ವಿದ್ಯಾರ್ಥಿಗಳ ಅರ್ಜಿಸಲ್ಲಿಸುವ ಶಿಕ್ಷಕರು ಪರೀಕ್ಷಾ ಕೇಂದ್ರಕ್ಕೆ ಸಲ್ಲಿಸುವ ಅರ್ಜಿಗಳು, ಬ್ಯಾಂಕ್ ಚಲನ್‌ನ ಜೆರಾಕ್ಸ್ ಪ್ರತಿಗಳನ್ನು ಇಟ್ಟುಕೊಳ್ಳುವುದು.

4) ಶಾಸ್ತ್ರ ಹಾಗೂ ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ತಾಳ್ಮೆಯಿಂದಿದ್ದು, ಶಾಂತಿಯುತವಾದ ವಾತಾವರಣವನ್ನು ಕಾಪಾಡಲು ಪೋಷಕರಿಗೆ ತಿಳಿಸುವುದು. ಪರೀಕ್ಷೆಗಳು ಸುಗಮವಾಗಿ ಸಕಾಲಕ್ಕೆ ನಡೆಯಲು ಪರೀಕ್ಷಾ ಕೇಂದ್ರದ ಸಿಬ್ಬಂದಿಗೆ ಸಹಕಾರ ನೀಡುವುದು.

5) ವಿದ್ಯಾರ್ಥಿಗಳು ಚಿಕ್ಕ ವಯಸ್ಸಿನವರಾದಲ್ಲಿ ಪೋಷಕರು/ಶಿಕ್ಷಕರು ತಪ್ಪಿಲ್ಲದಂತೆ ಓ.ಎಂ.ಆರ್ ಅರ್ಜಿಯಲ್ಲಿ ವಿವರಗಳನ್ನು ತುಂಬತಕ್ಕದ್ದು. ತಪ್ಪಾಗಿ ತುಂಬಿದಲ್ಲಿ ಮಂಡಳಿಯ ನಿಯಮಾನುಸಾರ ದಂಡ ವಿಧಿಸಲಾಗುವುದು. ಓ.ಎಂ.ಆರ್. ಅರ್ಜಿಯ ಜೆರಾಕ್ಸ್ ಪ್ರತಿಯಲ್ಲಿ ವಿದ್ಯಾರ್ಥಿಯ ವಿವರವನ್ನು ತುಂಬಿ ಸರಿಯಾಗಿದೆಯೆಂದು ಖಚಿತಪಡಿಸಿಕೊಂಡು ಆ ನಂತರ ಮೂಲ ಪ್ರತಿಯಲ್ಲಿ ವಿವರವನ್ನು ತುಂಬುವುದು. ತಪ್ಪಿದಲ್ಲಿ ಪೋಷಕರು/ಶಿಕ್ಷಕರು ಪೂರ್ಣ ಜವಾಬ್ದಾರರಾಗುತ್ತಾರೆ.

6) ಅರ್ಜಿ ಪಡೆಯಲು ಬರುವ ಎಲ್ಲಾ ಸಂಗೀತ ಶಿಕ್ಷಕರುಗಳಿಗೆ ಅವರ ಅಗತ್ಯಕ್ಕೆ ತಕ್ಕಂತೆ ಓ.ಎಂ.ಆರ್ ಅರ್ಜಿಗಳು ಮತ್ತು ನಾಮಿನಲ್ ರೋಲ್ ನೀಡುವುದು. ಅಗತ್ಯ ಬಿದ್ದಲ್ಲಿ ಪರೀಕ್ಷಾ ಕೇಂದ್ರದವರು/ಸಂಗೀತ,ನೃತ್ಯ ಹಾಗೂ ತಾಳವಾದ್ಯ ಶಿಕ್ಷಕರುನಾಮಿನಲ್ ರೋಲ್‌ನ್ನು ಜೆರಾಕ್ಸ್ ಮಾಡಿಸಿಕೊಳ್ಳುವುದು. ನಾಮಿನಲ್ ರೋಲ್‌ನಲ್ಲಿ ಮಾಹಿತಿ ಪರಿಶೀಲಿಸಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ದೃಢೀಕರಿಸುವುದು.

7) ಓ.ಎಂ.ಆರ್. ಅರ್ಜಿಗಳನ್ನು ಮತ್ತು ಪೂರಕ ದಾಖಲೆಗಳನ್ನು ನಾಮಾಂಕಿತ ಪಟ್ಟಿಯೊಂದಿಗೆ ವಿಷಯವಾರು ಜೋಡಿಸಿ ಪ್ರತ್ಯೇಕವಾಗಿ ಸಲ್ಲಿಸುವುದು.

8) **ಅಂಧ ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆ–** ಸಂಗೀತ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅಂಧ ಅಭ್ಯರ್ಥಿಗಳು ಪರೀಕ್ಷೆ ಬರೆಯುವ ಸಹಾಯಕರ ಸಂಪೂರ್ಣ ವಿವರವನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರ ದೃಢೀಕರಣದೊಂದಿಗೆ ಮಂಡಳಿಗೆ ಪರೀಕ್ಷಾ ಅರ್ಜಿ ಸಲ್ಲಿಸಿದ 15 ದಿವಸದೊಳಗೆ ಮಂಡಳಿಗೆ ಕಳುಹಿಸುವುದು. **ಅಂಧ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಬರೆಯುವ ಸಹಾಯಕರು ಸಂಗೀತ ಜ್ಞಾನವುಳ್ಳವರಾಗಿರಬಾರದು. ಕನಿಷ್ಠ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಪರೀಕ್ಷಾ ಸಹಾಯಕರಾಗಿ ಪರೀಕ್ಷೆ ಬರೆಯಲು ಒಪ್ಪಿಗೆ ಪತ್ರ ನೀಡಬೇಕು. ಅಲ್ಲದೆ ಸಹಾಯಕರ ಒಂದು ಪಾಸ್‌ಪೋರ್ಟ್ ಸೈಜ್ ಅಳತೆಯ ಭಾವಚಿತ್ರವನ್ನು ಒಪ್ಪಿಗೆಯ ಪತ್ರದೊಡನೆ ಲಗತ್ತಿಸಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಪ್ರತಿ ಸಮೇತ ಎಲ್ಲಾ ವಿವರಗಳನ್ನು ಪರೀಕ್ಷಾ ಕೇಂದ್ರದ ಮುಖ್ಯಅಧೀಕ್ಷಕರ ದೃಢೀಕರಣದೊಂದಿಗೆ ಸಲ್ಲಿಸಬೇಕು.**ಈ ಎಲ್ಲ ಮಾಹಿತಿಯ ಒಂದು ಪ್ರತಿಯನ್ನು ಪರೀಕ್ಷಾ ಕೇಂದ್ರದಲ್ಲಿ ಕಾಯ್ದಿರಿಸಿಕೊಳ್ಳುವುದು.

9) ಎಲ್ಲಾ ಪರೀಕ್ಷಾ ಕೇಂದ್ರದವರು ನಿಮ್ಮ ಕೇಂದ್ರಕ್ಕೆ ಅಭ್ಯರ್ಥಿಗಳು/ಸಂಗೀತ ಶಿಕ್ಷಕರುಗಳಿಂದಬಂದಿರುವಓ.ಎಂ.ಆರ್ ಅರ್ಜಿಗಳು, ಬ್ಯಾಂಕ್ ಚಲನ್, ಪೂರಕ ದಾಖಲೆಗಳು ಇತ್ಯಾದಿಗಳನ್ನು ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆ ಮುಖಾಂತರ ಕಳುಹಿಸುವುದು.

**ಶ್ರೀಮತಿ ಹೇಮಲತಾ ಡಿ. ನಾಯಕ್,**
**ಸಹಾಯಕ ನಿರ್ದೇಶಕರು**
**ಸಂಗೀತ ವಿಭಾಗ, 4ನೇ ಮಹಡಿ,**
**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,**
**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**

**ಮಂಡಳಿಯ ದೂರವಾಣಿ ಸಂಖ್ಯೆಗಳು : 080–23360108, 080–23360109**
**ಫ್ಯಾಕ್ಸ್ ನಂಬರ್: 080–23311146**

- ವಿಶೇಷ ಸಂಗೀತ ನೃತ್ಯ/ತಾಳವಾದ್ಯ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಸುತ್ತೋಲೆಗಳು, ಜ್ಞಾಪನ, ಫಲಿತಾಂಶ ಇತ್ಯಾದಿ ವಿವರಗಳನ್ನು ಮಂಡಳಿಯ ವೆಬ್‌ಸೈಟ್ **www.kseeb.kar.nic.in**ನಲ್ಲಿವೀಕ್ಷಿಸಬಹುದು.

ನಿರ್ದೇಶಕರು,

(ಇತರೆಪರೀಕ್ಷೆಗಳು)

ಇವರಿಗೆ

1) ಪರೀಕ್ಷಾ ಕೇಂದ್ರದ ಶಾಲಾ/ಕಾಲೇಜಿನ ಮುಖ್ಯಸ್ಥರಿಗೆ. ಹಾಗೂ ಸಂಗೀತ ಶಾಲಾ ಶಿಕ್ಷಕರುಗಳಿಗೆ.ಖಾಸಗಿ ಅಭ್ಯರ್ಥಿಗಳಿಗೆ.

2) ರಾಜ್ಯ ಅಧೀಕ್ಷಕರು, ಸಂಗೀತ/ನೃತ್ಯ ವಿಭಾಗ, ಆಯುಕ್ತರ ಕಛೇರಿ, ಬೆಂಗಳೂರು.

3) ವಿಭಾಗೀಯ ಅಧೀಕ್ಷಕರು, ಮೈಸೂರು/ಬೆಂಗಳೂರು/ಬೆಳಗಾಂ/ಗುಲ್ಬರ್ಗ ವಿಭಾಗ.
4) ಕಛೇರಿ ಪ್ರತಿ.